# ನಾದ ನೂಪುರ ವಂಡಾರು

# Nadanoopura Vandaru



ಕವಿ ಕಾಳಿದಾಸ ರಚನೆಯ ಮಾಲವಿಕಾಗ್ನಿಮಿತ್ರಮ್–ಯಕ್ಷಗಾನದ ಒಂದು ದೃಶ್ಯ

ಮುಖ್ಯಸ್ಥರು – ವಂಡಾರು ಗೋವಿಂದ
97418 47278
ಪ್ರಧಾನ ಸಂಪಾದಕರು – ಶುಭಾಶಯ
ಗೌರವ ಸಂಪಾದಕರು – ಅಜಿತ್ ಕಾರಂತ್
94496 86807

Nadanoopura Yakshothana Trust (NYT) (R.)
Vandaru, Marvi, Vandaru village and Post,
Brahmavara Taluk, Udupi District – 576223
Email : nadanoopuravandaru@gmail.com
Website – www.nyt.1ngo.in

## ಪರಿವಿಡಿ

ಬೋರ್ಡ್ ರೂಮ್
ಸಂಪಾದಕೀಯ
ಯಕ್ಷ ರಂಗಾಯಣ ಬೇಕೇ?
ಸಂಘಟಕರಿಗೆ ಭಾರವಾಯಿತೇ ವೀಳ್ಯ??
ಶೀರ್ಷಿಕೆ ಬದಲಾವಣೆ ಎಷ್ಟು ಸರಿ?
ಉಭಯ ತಿಟ್ಟುಗಳ ಸವ್ಯಸಾಚಿ – ಕಡತೋಕ ಮಂಜುನಾಥ ಭಾಗವತ
ಧೀರಕಲೆಯೊಳಗೆ ಕೀರವಾಣಿಯರು – ಮೂಕಾಂಬಿಕಾ ವಾರಂಬಳ್ಳಿ
ಯಕ್ಷ ನೋಟ – ನರಾಡಿ ಭೋಜರಾಜ ಶೆಟ್ಟಿ
ನಮ್ಮ ಲೈಬ್ರರಿ – ಅತಿಕಾಯ ಕಾಳಗ

## ಬೋರ್ಡ್ ರೂಮ್



ವಂಡಾರು ಗೋವಿಂದ

**ನಮಸ್ಕಾರ ಸ್ನೇಹಿತರೆ,**

ಮಾನಸಿಕವಾದ ಸಂತೋಷ ನೆಮ್ಮದಿಯೇ ಸುಖ ಜೀವನದ ಸಂಕೇತ. ಈ ಮಾತನ್ನು ಯಾಕೆ ಹೇಳುತ್ತಿದ್ದೇನೆಂದರೆ ನನ್ನ ವೃತ್ತಿ ಬದುಕಿನಲ್ಲಿ ಸಾಕಷ್ಟು ಕೀರ್ತಿ ತಂದ ಸಾಲಿಗ್ರಾಮ ಮೇಳಕ್ಕೆ ವಿದಾಯ ಹೇಳಿ, ನನ್ನ ಕಲಾಸೇವೆಯನ್ನು ಮಂದಾರ್ತಿ ಮೇಳದಲ್ಲಿ ಮುಂದುವರೆಸುವ ನನ್ನ ತೀರ್ಮಾನದ ಕುರಿತು ನನ್ನ ಜನರು ಅಂದರೆ ನನ್ನ ಅಭಿಮಾನಿಗಳು ತುಂಬ ಬೇಸರ ವ್ಯಕ್ತಪಡಿಸಿ ಈ ನಿರ್ಧಾರ ತೆಗೆದುಕೊಳ್ಳಬಾರದಿತ್ತು ಎಂಬುದಾಗಿ ಹೇಳುತ್ತಿದ್ದಾರೆ. ಕೋರೋನ ಬಿಕ್ಕಟ್ಟಿನ ನಂತರ ಮೇಳಗಳಿಗೆ ದೊರಕುವ ಆಟಗಳು ಕಡಿಮೆಯಾಗುತ್ತಾ ಬಂದವು, ಕೌಟುಂಬಿಕ ಹಾಗೂ ಆರ್ಥಿಕ ಭದ್ರತೆಯನ್ನು ಆದ್ಯತೆಯನ್ನಾಗಿಟ್ಟುಕೊಂಡು ಮಂದಾರ್ತಿ ಮೇಳದಲ್ಲಿ ತಿರುಗಾಟ ನಡೆಸುವ ನಿರ್ಧಾರ್ರಕ್ಕೆ ಬಂದಿದ್ದೇನೆ. ಅದಲ್ಲದೆ, ಮೇಳದ ಸಂಗಡಿಗರೊಂದಿಗಾಗಲೀ, ಯಜಮಾನರೊಂದಿಗಾಗಲೀ ಯಾವುದೇ ಮನಸ್ತಾಪಗಳಿಲ್ಲ. ಈ ಸಂದರ್ಭದಲ್ಲಿ ಬೇಡಿಕೆ ಗಳಿಸುವಂತಹಾ ಕಾಲದಲ್ಲಿ ಕಲಾವಿದನೊಬ್ಬ ಟೆಂಟ್ ಮೇಳವನ್ನು ತ್ಯಜಿಸುವುದು ಸೂಕ್ತವಲ್ಲ, ಮಂದಾರ್ತಿ ಮೇಳದಲ್ಲಿ ಗುರುತಿಸಿಕೊಳ್ಳುವ ಅವಕಾಶ ಕಡಿಮೆ ಇಂತಹ ಮಾತುಗಳು ಬಹಳಷ್ಟು ಕೇಳಿ ಬಂತು. ಆದರೆ ಆ ಅಭಿಪ್ರಾಯಗಳು ನಿಜವಲ್ಲ ಎನ್ನುವುದು ನನ್ನ ಭಾವನೆ. ಪೌರಾಣಿಕ ಪ್ರಸಂಗಗಳಳಲ್ಲೇ ಕಲಾವಿದನೊಬ್ಬ ತನ್ನ ಸಾಮರ್ಥ್ಯವನ್ನು ತೋರಿಸಿಕೊಳ್ಳಬಹುದಾದ ವಿಪುಲ ಅವಕಾಶಗಳಿವೆ. ಅವಕಾಶವನ್ನು ನಾವು ಹೇಗೆ ಬಳಸಿಕೊಳ್ಳುತ್ತೇವೆ ಎಂಬುದರ ಮೇಲೆ ಖ್ಯಾತಿ ಹಾಗೂ ಒಬ್ಬ ಕಲಾವಿದನ ಬೆಳವಣಿಗೆ ನಿಂತಿದೆ. ಈ ಅರ್ಥದಲ್ಲಿ ಮಂದಾರ್ತಿ ಮೇಳದಲ್ಲಿ ನನ್ನ ಬೆಳವಣಿಗೆ ಖಂಡಿತ ಕುಂಠಿತವಾಗಲಾರದು. ಸಂತೋಷ, ನೆಮ್ಮದಿ ಎಂದರೆ ಸಂಪಾದನೆ, ಹಾಗೂ ಜಾಗಕ್ಕೆ ಸಂಬಂಧಿಸಿದ್ದಲ್ಲ. ಅದು ಮನಸಿಗೆ ಸಂಬಂಧಿಸಿದ್ದು. ಎಲ್ಲಿದ್ದರೂ ನಮ್ಮ ಸ್ಥಿತಿಗತಿಗಳನ್ನು ನಾವು ಹೇಗೆ ಸ್ವೀಕರಿಸುತ್ತೇವೆ ಎಂಬುದರಲ್ಲಿ ಜೀವನದ ಸಂತೋಷ ಇದೆ. ಹಾಗಾಗಿ ಮಂದಾರ್ತಿ ಮೇಳದ ಕಲಾತಿರುಗಾಟ ನನ್ನ ಯಕ್ಷಬದುಕಿನಲ್ಲಿ ಮೈಲಿಗಲ್ಲಾಗಲಿದೆ. ನಿಮ್ಮ ಅಭಿಮಾನ ಪ್ರೋತ್ಸಾಹ ಮುಂದೆಯೂ ನನ್ನ ಮೇಲಿರಲಿ ಎಂದು ಬಯಸುತ್ತೇನೆ. ಈ ಅವಧಿಯಲ್ಲಿ ನನ್ನದೇ ಆದ ಟ್ರಸ್ಟ್ ನ ಚಟುವಟಿಕೆಗಳಿಗೆ ಒಂದಷ್ಟು ಸಮಯ ಕೊಡಲೂ ಅವಕಾಶವಾಗಿದೆ. ಈ ಸಂದರ್ಭ ನಮ್ಮ ಟ್ರಸ್ಟ್ ಒಂದು ವಿನೂತನ ಪ್ರಯೋಗಕ್ಕೆ ಮುಂದಾಗಿರುವ ಕುರಿತು ನಿಮ್ಮೊಂದಿಗೆ ಹಂಚಿಕೊಳ್ಳಲು ಹರ್ಷಿಸುತ್ತೇನೆ. ಕಳೆದ ಮಾಸಿಕದಲ್ಲಿ ಪ್ರದರ್ಶನಗೊಂಡ ಮಾಳವಿಕಾಗ್ನಿಮಿತ್ರ ಶೀಘ್ರದಲ್ಲೇ ಯೂಟ್ಯೂಬ್ ನಲ್ಲಿ ಪೂರ್ಣ ಯಕ್ಷಗಾನ ಬಿಡುಗಡೆಯಾಗುವುದಲ್ಲದೇ, ಆಂಗ್ಲ ಭಾಷೆಯಲ್ಲಿ ಪಿಕ್ಟೋರಿಯಲ್ ರೂಪದಲ್ಲಿ ಪ್ರಸ್ತುತ ಪಡಿಸಲಿದ್ದೇವೆ. ಈ ಮೂಲಕ ಈ ಆಖ್ಯಾನ ಕನ್ನಡ ಪ್ರೇಕ್ಷಕರಷ್ಟೇ ಅಲ್ಲದೆ, ಜಾಗತಿಕವಾಗಿ ಕಾಳಿದಾಸನ ಮಹಾಕಾವ್ಯ ಕಥಾ ನಿರೂಪಣೆಯ ಮೂಲಕ ಬಿತ್ತರವಾಗಲಿದೆ. ಇದು ಡಿಜಿಟಲ್ ಮಾಧ್ಯಮ ಹಾಗೂ ತಾಂತ್ರಿಕತೆ ಕಲ್ಪಿಸಿದ ಅವಕಾಶ. ಕಥಾ ನಿರೂಪಣೆಯ ಜೊತೆಗೆ ಯಕ್ಷಗಾನದ ಭಾಗಗಳನ್ನು ಬಿಟ್ಸ್ ಮತ್ತು ಪೀಸ್ ಗಳಲ್ಲಿ ಸೇರ್ಪಡೆಗೊಳಿಸುವುದರಿಂದ ವೀಕ್ಷಕರನ್ನು ಮತ್ತಷ್ಟು ಸೆಳೆದುಕೊಳ್ಳುವುದರಲ್ಲಿ ಸಂಶಯವೇ ಇಲ್ಲ. ಶೀಘ್ರದಲ್ಲಿ ಮಾಳವಿಕೆಯ ಹೊಸರೂಪ ನಿಮ್ಮ ಮುಂದೆ ಬರಲಿದೆ. ನಿಮ್ಮ ಸಲಹೆ ಸೂಚನೆಗಳಿಗೆ ಸ್ವಾಗತ. ಪ್ರೀತಿ ಇರಲಿ

## ಸಂಪಾದಕೀಯ – ಅಂತರಂಗ ಮಥನದ ಸಮಯ

ಮಾಧ್ಯಮ ಒಂದು ಜವಾಬ್ದಾರಿ. ರಂಗದಲ್ಲಿ ಪ್ರದರ್ಶನಗೊಳ್ಳೋ ಕಲೆಗಳೂ ಒಂದು ಒಟ್ಟು ತಂಡದ ಜವಾಬ್ದಾರಿ.. ಯಕ್ಷಗಾನ ಕಲೆಯ ಬಗ್ಗೆ ಹೇಳೋದಾದ್ರೆ ಕಥಾವಸ್ತುವಿನ ಪ್ರಸ್ತುತಿ ಹೇಗಿರಬೇಕು, ವೇದಿಕೆಯಲ್ಲಿ (ರಂಗದಲ್ಲಿ) ಸಂವಾದ ಹೇಗಿರಬೇಕು? ಯಾವ ಭಾಷಾಪ್ರಯೋಗ ಉಚಿತ/ಅನುಚಿತ, ಶೀರ್ಷಿಕೆ ಆಯ್ಕೆ, ಕೃತಿನಕಲು, ಮೊದಲಾದ ವಿಚಾರಗಳಲ್ಲಿ ನೈತಿಕತೆ ಸೂಕ್ಷ್ಮತೆ ಹಾಗೂ ಪ್ರಬುದ್ಧತೆಯನ್ನು ತೋರಿಸಬೇಕಾದದ್ದು ಪ್ರತಿಯೊಬ್ಬನ ಕರ್ತವ್ಯ. ಯಾಕೆಂದರೆ, ಪ್ರದರ್ಶನ ಕಲೆಗಳ ಮೂಲಕ ಸಮಾಜಕ್ಕೆ ಸಂದೇಶ ರವಾನೆಯಾಗುತ್ತದೆ. ಮನರಂಜನೆ ಮನಸಿನ ಮೇಲೆ ಅನೂಹ್ಯ ಪ್ರಭಾವ ಬೀರುತ್ತದೆ. ಮೇಲೆ ಹೇಳಿದ ವಿಚಾರಗಳ ಬಗ್ಗೆ ಇಂಥದ್ದೇ ಒಂದು ಶಾಸನ ಅಂತಿಲ್ಲವಾದ್ರೂ ಅದನ್ನು ಹೇಗೆ ಪ್ರಸ್ತುತಪಡಿಸಬೇಕು, ಯಾವುದು ಮೊರಾಲಿಟಿ ಎಂಬ ಪ್ರಜ್ಞೆ ಅಳವಡಿಸಿಕೊಳ್ಳಬೇಕು.. ಅದಿಲ್ಲವಾದರೆ ಎಂತದ್ದೇ ಕಲೆಯಾಗಲಿ ನಿಧಾನಕ್ಕೆ ಪತನವಾಗೋದ್ರಲ್ಲಿ ಸಂಶಯವೇ ಇಲ್ಲ. ಬಹುಶಃ ಹಿರಿ ಅನುಭವಿ ಕಲಾವಿದರುಗಳ ಅನುಭವ ಅನಿಕಸಿಕೆಗಳನ್ನು ಆಲಿಸಿದಾಗ ಅದು ಸತ್ಯವೇನೋ ಎಂದೆನಿಸುತ್ತದೆ. ಹಿಎಯ ಕಲಾವಿದರೊಬ್ಬರು ಮಾತನಾಡ್ತಾ ಈಗೇನು ಪ್ರದರ್ಶನಗೊಳ್ಳುತ್ತಿದೆಯೋ ಅದು ನೈಜ ಯಕ್ಷಗಾನವೇ ಅಲ್ಲ ಎಂಬ ಮಾತು ಈ ವಾಕ್ಯಕ್ಕೆ ಇನ್ನಷ್ಟು ಪುಷ್ಠಿ ನೀಡುತ್ತಿದೆ. ಪ್ರದರ್ಶನದ ವಿಚಾರಕ್ಕೆ ಪ್ರೇಕ್ಷಕರಲ್ಲಿ ಕುತೂಹಲ ನಿರೀಕ್ಷೆ ಮೂಡಿಸುವ ಉದ್ದೇಶದಿಂದ ಪ್ರಚಲಿತದಲ್ಲಿರುವ ಪೌರಾಣಿಕ ಪ್ರಸಂಗಗಳಿಗೆ ವಿಭಿನ್ನ ಶೀರ್ಷಿಕೆ ನೀಡೋದು ಇತ್ತೀಚೆಗೆ ಟ್ರೆಂಡ್ ಆಗಿದೆ. ಇಂತಹಾ ಶೀರ್ಷಿಕೆಗಳು ಕಥೆಗೆ ಪೂರಕವೂ ಆಗಿರೋದಿಲ್ಲ. ಅರ್ಥಪೂರ್ಣವೂ ಆಗಿರೋದಿಲ್ಲ ಅನ್ನೋದು ವಿಷಾದನೀಯ. ಹೇಳಲೂ ವಾಕ್ಕಠೋರ ಶಬ್ದಪುಂಜಗಳು.. ನಿಜವಾದ ಕವಿ ಮತ್ತೆ ಜೀವಂತವಾಗಿ ಬಂದು ನೋಡಿದರೆ ಆತ್ಮಹತ್ಯೆಯೇ ಮಾಡಿಕೊಳ್ಳಬೇಕೇನೋ ಎನ್ನುವಷ್ಟರ ಮಟ್ಟಿಗೆ ಹೊಸ ಶೀರ್ಷಿಕೆಗಳು ಜನ್ಮ ತಾಳಿವೆ... ಈ ಬೆಳವಣಿಗೆಗಳಿಂದ ಯಕ್ಷಗಾನವು ಅಪ್ರಬುದ್ಧರ ಕಲೆ ಎಂದು ಬಿಂಬಿತವಾದರೂ ಆದೀತು ಎಂಬುದು ಆತಂಕದ ಸಂಗತಿ.. ಈ ಎಲ್ಲಾ ಅಂಶಗಳ ಸವಿಸ್ತಾರ ಮಂಡನೆ ಈ ಸಂಚಿಕೆಯನ್ನು ಮೂಡಿಬಂದಿದೆ. ಜೊತೆಗೆ ಮೇಳಗಳ ಪ್ರದರ್ಶನ ಸಂಖ್ಯೆ ಕುಂಠಿತವಾಗಿರುವ ಕುರಿತು ಅವಲೋಕನವೂ ನಿಮ್ಮ ಮುಂದಿದೆ. ಇತ್ತೀಚಿನ ಪ್ರದರ್ಶನಗಳನ್ನು ಗಮನಿಸಿದರೆ ಕೆಲ ಕಲಾವಿದರು ನಾಟ್ಯಕ್ಕಷ್ಟೇ ಸೀಮಿತವಾಗುತ್ತಿದ್ದಾರೆ, ಕೆಲವರು, ಮಾತಿಗಷ್ಟೇ ಸೀಮಿತ, ಭಾಗವತರು ಅವರ ಅವಧಿಯ ಹಾಡಿನ ವೈಭವಕ್ಕಷ್ಟೇ ಸೀಮಿತವಾಗುತ್ತಿದ್ದಾರೆ. ಅದರಾಚೆಗಿನ ಕಲಿಕೆಗಳಲ್ಲಿ ಒಲವಿಲ್ಲದೇ ಹೋದಾಗ ಕಲಾವಿದರ ಬೌದ್ಧಿಕ ಬಂಡವಾಳ ಕುಸಿತ ಕಾಣುತ್ತದೆ. ಕಥೆ ಎಷ್ಟೇ ಸತ್ವಪೂರ್ಣವಾಗಿದ್ದರೂ ಪ್ರಸಂಗವನ್ನೇ ಮೇಲೆ ಬೀಳಿಸುವವರೇ ನಾವು. ನಮ್ಮ ಪ್ರತಿಭೆಯಿಲ್ಲದೆ ಹೋದರೆ ಕಥೆ ಸತ್ತೇ ಹೋಗಬಲ್ಲುದು ಎಂಬ ಇನ್ ವಿಸಿಬಲ್ ಇಗೋ ಹೊಂದಿರುವ ಕಲಾವಿದರು ನೈಜವಾಗಿ ಪರಿಶ್ರಮ ಹಾಕಿದರೆ ಎಂತಹ ಕಳಪೆ ಪ್ರಸಂಗವನ್ನಾದರೂ ತಮ್ಮ ಕಲಾಕೌಶಲ್ಯದಿಂದ ಮೇಲೆ ಹಾಕಬಲ್ಲೆವೆಂಬ ಕಾನ್ಫಿಡೆನ್ಸ್ ಯಾಕಿರಲ್ಲ?? ಇತ್ತೀಚಿಗೆ ಕಲಾವಿದರೊಬ್ಬರಲ್ಲಿ ಹೊಸ ಪ್ರಸಂಗದಲ್ಲಿ ಭಾಗವಹಿಸ್ತೀರಾ ಎಂದು ಕೇಳಿದಾಗ ಇಲ್ಲ ಮೇಡಂ ಹೊಸ ಪ್ರಸಂಗ ತಯಾರಾಗಲು ಕಷ್ಟವಾಗುತ್ತದೆ ಎಂದು ಜಾರಿಸಿಕೊಂಡರು. ಇದು ಕಲಾವಿದರ ಹೊಸ ಕಲಿಕೆಯ ಬಗೆಗಿನ ಅನಾದರವನ್ನು ತೋರಿಸುತ್ತದೆ. ಹವ್ಯಾಸಿ ಕಲಾವಿದರು ಯಕ್ಷಗಾನದಲ್ಲಿ ತಮ್ಮ ಜ್ಞಾನವ್ಯಾಪ್ತಿ ವಿಸ್ತರಿಸಿಕೊಂಡು ಕಲೆಯಲ್ಲಿ ಪ್ರಬುದ್ಧತೆ ಸಾಧಿಸುತ್ತಿರುವ ಹಾಗೂ ವೃತ್ತಿಪರ ಮೇಳಗಳು ಪರಾವಲಂಬಿ ಬೂಸ್ಟ್ ಗಳಂತೆ ಯಾವ್ಯಾವುದೋ ಸರಕುಗಳನ್ನು ಬಳಸಿಕೊಂಡು ಕುಸಿಯುತ್ತಿರುವ ಕುರಿತೂ ಸುದೀರ್ಘ ಚಿಂತನೆ ನಡೆದಿದೆ. ವಿಶೇಷ ಆಕರ್ಷಣೆಗಳಿಲ್ಲದೇ ಹೋದರೆ ಪ್ರೇಕ್ಷಕರನ್ನು ಟೆಂಟಿನತ್ತ ಸೆಳೆಯುವುದು ಸವಾಲಾಗಿದೇ ಎಂಬ ಪ್ರಶ್ನೆಗೆ ಕಲಾವಿದ ನರಾಡಿ ಭೋಜರಾಜರು ಪ್ರತಿಕ್ರಿಯಿಸಿದ್ದಾರೆ. ಒಟ್ಟಿನಲ್ಲಿ ಈ ಸಂಚಿಕೆಯ ಲೇಖನಗಳು ಒಂದಕ್ಕೊಂದು ಪೋಣಿಸಿಕೊಂಡಿದ್ದು ಕಲಾವಿದರು ಹಾಗೂ ಪ್ರೇಕ್ಷಕರನ್ನು ಚಿಂತನೆಗೆ ಹಚ್ಚಲಿದೆ. ಓದಿ ಪ್ರತಿಕ್ರಿಯಿಸಿ..

## ಯಕ್ಷ ರಂಗಾಯಣ ಬೇಕೇ?

ಉಡುಪಿ ಜಿಲ್ಲೆಯಲ್ಲಿ ಯಕ್ಷರಂಗಾಯಣ ಸ್ಥಾಪನೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಇದರ ಅಗತ್ಯತೆ ಎಷ್ಟರ ಮಟ್ಟಿಗಿದೆ? ಯಾವ ಉದ್ದೇಶಕ್ಕಾಗಿ ರೂಪಿಸಬೇಕು? ಯಕ್ಷಗಾನ ಕಲೆ ಕಲಾವಿದರ ಅನುಕೂಲಕ್ಕೆ ಬೇರೇನು ಪರ್ಯಾಯ ವ್ಯವಸ್ಥೆ ಮಾಡಿದರೆ ಸೂಕ್ತ ಇವೆಲ್ಲದರ ಬಗ್ಗೆ ಒಂದು ಅಮೂಲಾಗ್ರ ವಿಶ್ಲೇಷಣೆ ಇಲ್ಲಿದೆ.

*ಕಾರಣ ಗಳು ಮತ್ತು ಅವಲೋಕನ/ ವಿಶ್ಲೇಷಣೆ*



ಚಿತ್ರ ಕೃಪೆ: ಮನೋಹರ್ ಕುಂದರ್

**ಕಾರಣ 1. ಈವರೆಗೆ ರಾಜ್ಯದಲ್ಲಿ ಎಲ್ಲಿಯೂ ಯಕ್ಷಗಾನಕೆ ಸಂಬಂಧಿಸಿದಂತೆ ರಂಗಾಯಣ ಸ್ಥಾಪನೆಯಾಗಿರುವುದಿಲ್ಲ.**

**ಅವಲೋಕನ–** ರಾಜ್ಯದಲ್ಲಿ ಯಕ್ಷಗಾನಕೆ ಸಂಬಂಧಿಸಿದಂತೆ ಯಕ್ಷರಂಗಾಯಣ ಯಾಕೆ ಸ್ಥಾಪನೆಯಾಗಬೇಕು? ಯಕ್ಷಗಾನ ಕಲೆಯು ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಒಂದು ಆರಾಧನಾ ಕಲೆಯಾಗಿದ್ದು, ಸುಮಾರು 12 ನೇ ಶತಮಾನದಿಂದೀಚೆ ಮಠಮಾನ್ಯಗಳು ದೇವಸ್ಥಾನಗಳ ಆಶ್ರಯದಲ್ಲಿ ಧರ್ಮ ಹಾಗೂ ಸಂಸ್ಕೃತಿಯ ಪ್ರಚಾರಕ್ಕಾಗಿ ಈ ಕಲೆಯನ್ನು ಬಳಸಿಕೊಂಡು ತನ್ಮೂಲಕ ಧರ್ಮೋತ್ಥಾನಗೊಂಡಿದ್ದು ಸುಸ್ಪಷ್ಟ .ಈಗಲೂ ಧರ್ಮಸ್ಥಳ ಕಟೀಲು ಮಂದಾರ್ತಿ ಮಾರಣಕಟ್ಟೆ ಸೌಕೂರು ಅಮ್ಮತೇಶ್ವರಿ ಹಾಗೂಇನ್ನೂ ಹತ್ತು ಹಲವು ಧಾರ್ಮಿಕ ಕ್ಷೇತ್ರಗಳಲ್ಲಿ ಸರಿ ಸುಮಾರು 45 ಕ್ಕೂ ಮಿಕ್ಕಿದ ಹರಕೆ ಹಾಗೂ ವ್ಯವಸಾಯ ಯಕ್ಷಗಾನ ಮೇಳಗಳು ಕಾರ್ಯಾಚರಿಸುತ್ತಿವೆ. ಜೊತೆಗೆ ಸರಕಾರವು ಕೂಡಾ ಯಕ್ಷಗಾನ ಕಲೆಯ ಕುರಿತಾದ ಚಟುವಟಿಕೆಗಳಿಗೆ ಮೀಸಲಾಗಿರಿಸಿ ಯಕ್ಷಗಾನ ಅಕಾಡೆಮಿ ರಚನೆಯನ್ನು ಮಾಡಿದೆ .ಅದನ್ನು ಹೊರತು ಪಡಿಸಿ ಇನ್ನೊಂದು ಯಕ್ಷ ರಂಗಾಯಣದ ರಚನೆ ಯಾವ ಕಾರಣಕ್ಕಾಗಿ ಆಗಬೇಕು ?

**ಕಾರಣ 2. ಯಕ್ಷಗಾನ ಕಲೆಯನ್ನು ವಿಸ್ತರಿಸುವ ದೃಷ್ಟಿಯಿಂದ, ಕರಾವಳಿ ಭಾಗದಲ್ಲಿ ಯಕ್ಷಗಾನದಲ್ಲಿ ವೃತ್ತಿಪರತೆಯನ್ನು ತರುವ ನಿಟ್ಟಿನಲ್ಲಿ, ಇತರ ರಂಗಾಯಣದಂತೆ ರಂಗ ಚಟವಟಿಕೆಗಳನ್ನು ನಡೆಸುವ ಹಾಗೆ ಸ್ಥಳೀಯ ಹವ್ಯಾಸಿ ಯಕ್ಷಪ್ರತಿಭೆಗಳನ್ನು ಗುರುತಿಸಿ ಅವಕಾಶ ಕಲ್ಪಿಸಿದಲ್ಲಿ ಪರಿಣಾಮಕಾರಿಯಾಗಿ ನಿರ್ವಹಣೆ ಮಾಡಲು ಯಕ್ಷರಂಗಾಯಣದ ಮೂಲಕ ಅನುಕೂಲವಾಗುತ್ತದೆ.**

ಈ ಮೇಲಿನ ಕುರಿತು ವಿಶ್ಲೇಷಿಸುತ್ತಾ.. ಯಕ್ಷಗಾನವನ್ನು ಯಾವ ಮಟ್ಟದಲ್ಲಿ ವಿಸ್ತರಿಸುವ ಯೋಜನೆ? ರಾಜ್ಯ ವ್ಯಾಪಿಯಲ್ಲಿ? ರಾಷ್ಟ್ರವ್ಯಾಪಿಯಲ್ಲಿ? ವಿಶ್ವ ವ್ಯಾಪಿಯಲ್ಲಿ? ಯಕ್ಷಗಾನವು ಈಗಾಗಲೆ ಎಲ್ಲಾ ವ್ಯಾಪಿಯಲ್ಲಿಯು ಆವರಿಸಿಕೊಂಡು ಸಾಗರೋಲ್ಲಂಘನ ಕೂಡಾ ಮಾಡಿ ವಿಶ್ವ ವ್ಯಾಪಿಯಾಗಿ ತನ್ನ ಅಸ್ಮಿತೆಯನ್ನು ತೋರಿಸಿ ಕೊಟ್ಟಿದೆ. ಇನ್ನು ವೃತ್ತಿಪರತೆಯ ಕುರಿತಾಗಿ ಹೇಳುವುದಿದ್ದರೆ... ಯಕ್ಷಗಾನ ಕ್ಷೇತ್ರದಲ್ಲಿ 45 ಕ್ಕೋ ಮಿಕ್ಕಿದ ವೃತ್ತಿಪರ ಮೇಳಗಳು ವರ್ಷದಲ್ಲಿ ಆರು ತಿಂಗಳುಗಳ ಕಾಲ ನಿರಂತರವಾಗಿ ರಂಗ ಚಟುವಟಿಕೆಯಲ್ಲಿ ತೊಡಗಿಕೊಂಡಿವೆ .ಯಕ್ಷಗಾನ ಕಲೆಯನ್ನು ಹೊರತುಪಡಿಸಿ ಇನ್ನಿತರ ರಂಗಕಲೆಗಳು ಇವತ್ತಿಗೂ ವೃತ್ತಿಪರಮೇಳ ಅಥವಾ ರಂಗತಂಡಗಳು ಮೇಳ ಕಟ್ಟಿಕೊಂಡು ತಿರುಗಾಟ ಮಾಡುತ್ತಾ ಇಲ್ಲ. ಇಲ್ಲಿ ತಿಳಿಸಿದಂತೆ ಇತರ ರಂಗಾಯಣದಂತೆ ರಂಗ ಚಟುವಟಿಕೆಗಳನ್ನು ನಡೆಸಿ ಸ್ಥಳೀಯವಾದ ಯಕ್ಷಪ್ರತಿಭೆಗಳನ್ನು ಗುರುತಿಸಿ ಅವರಿಗೆ ಅವಕಾಶವನ್ನು ಕಲ್ಪಿಸುವಲ್ಲಿ ಪ್ರತ್ಯೇಕ ಯಕ್ಷರಂಗಾಯಣದ ಅಗತ್ಯ ಇದೆಯೇ ?ಯಾಕಂದರೆ ಈಗಾಗಲೇ ಹಲವಾರು ಹವ್ಯಾಸಿ ಯಕ್ಷಗಾನ ಸಂಘಗಳು ಉಡುಪಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಅದಕ್ಕೆ ಬೇಕಾದ ವಿತ್ತೀಯ ಸಂಪನ್ಮೂಲವನ್ನು ಸಂಸ್ಕೃತಿ ಇಲಾಖೆ , ಅಕಾಡೆಮಿ, ಹಾಗೂ ಸ್ಥಳೀಯ ಮೂಲದಿಂದ ಪಡೆದುಕೊಂಡು ಗಣನೀಯ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ.

**ಕಾರಣ 3. ಉಡುಪಿ ಜಿಲ್ಲೆಯು ಯಕ್ಷಗಾನ ಕಲೆಗೆ ಹೆಸರು ವಾಸಿಯಾಗಿದ್ದು, ಯಕ್ಷ ರಂಗಾಯಣದ ಸ್ಥಾಪನೆ ಗೊಂಡಲ್ಲಿ ಅನೇಕ ಪ್ರತಿಭಾವಂತ ಯಕ್ಷಗಾನ ಕಲಾವಿದರಿಗೆ ಪ್ರೋತ್ಸಾಹ ಹಾಗೂ ಅವಕಾಶ ಕಲ್ಪಿಸಿದಂತಾಗುತ್ತದೆ.**

**ಅವಲೋಕನ–** ಉಡುಪಿ ಜಿಲ್ಲೆಯು ಯಕ್ಷಗಾನ ಕಲೆಗೆ ಆಶ್ರಯ ತಾಣವಾಗಿದ್ದು ಈ ಮೇಲೆ ತಿಳಿಸಿದಂತೆ ಅಸಂಖ್ಯಾತ ಯಕ್ಷಗಾನ ಮೇಳಗಳು ಕಾರ್ಯನಿರ್ವಹಿಸುತ್ತಿವೆ.ಅದು ಕಲಾವಿದರಿಗೆ ಜೀವನೋಪಯದ ದಾರಿಯೂ ಆಗಿದೆ. ಅವರಿಗೆ ಪ್ರೋತ್ಸಾಹ ಹಾಗೂ ಅವಕಾಶಗಳ ಕಲ್ಪನೆ ಸಾಕಾರಗೊಳ್ಳುವುದು ಮೇಳ ರಚನೆಯಿಂದ. ವಾಸ್ತವಿಕವಾಗಿ ಈಗ ತಿರುಗಾಟ ಮಾಡುವ ಮೇಳ ಕಲಾವಿದರಿಗೆ ಪಿಂಚಣಿ, ಆರೋಗ್ಯ ಕಾರ್ಡ್, ವಿಮೆ, ಇತ್ಯಾದಿ ಸವಲತ್ತುಗಳ ಪೂರೈಕೆ ಬಗ್ಗೆ ಸರಕಾರದ ಕಡೆಯಿಂದ ಪಯತ್ನ ಆಗಬೇಕೇ ಹೊರತು ಇನ್ನಷ್ಟು ಮೇಳ ಅಥವಾ ಇನ್ನಿತರ ಸಂಘಟನೆ ಪರಿಹಾರ ಅಲ್ಲ.

**ಕಾರಣ 4. ಯಕ್ಷರಂಗಾಯಣವನ್ನು ಉಡುಪಿಯಲ್ಲಿ ಸ್ಥಾಪಿಸುವುದರಿಂದ ಸಾಂಸ್ಕೃತಿಕ ಲೋಕದಲ್ಲಿ ಹೆಚ್ಚಾಗಿ ಕರಾವಳಿ ಭಾಗದಲ್ಲಿರುವ ಯಕ್ಷಗಾನ ಕಲಾವಿದರಿಗೆ ಮನ್ನಣೆ ದೊರಕಿದಂತಾಗುತ್ತದೆ.**

**ಅವಲೋಕನ–** ಯಕ್ಷಗಾನ ಕಲಾವಿದರಿಗೆ ಮನ್ನಣೆಯನ್ನು ಯಕ್ಷರಂಗಾಯಣದ ಮೂಲಕ ದೊರಕಿಸುವ ಬದಲು ಇದ್ದ ವ್ಯವಸಾಯ ಯಕ್ಷಗಾನ ಮೇಳಗಳಿಗೆ ವಾರ್ಷಿಕ ಅನುದಾನ, ಹಾಗೂ ಕಲಾವಿದರಿಗೆ ಅನುಕೂಲಕರ ಸವಲತ್ತುಗಳನ್ನು ಕಲ್ಪಿಸುವತ್ತಸರಕಾರ ಮನ ಹರಿಸುವ ಮೂಲಕ ಮನ್ನಿಸ. ಆ ಕುರಿತು ಈಗಾಗಲೇ ಅಸ್ತಿತ್ವದಲ್ಲಿರುವ ಯಕ್ಷಗಾನ ಅಕಾಡೆಮಿಯನ್ನೇ ಸಮರ್ಥ ರೆಪರ್ಟರಿಯಾಗಿ ಬಳಸಿಕೊಳ್ಳಬಹುದು ತಾನೇ ..

**ಕಾರಣ 5. ವಿಶೇಷವಾಗಿ ತೆಂಕು– ಬಡಗಿನ ಕಲಾವಿದರಿಗೆ ತಮ್ಮ ಪ್ರತಿಭೆಯನ್ನು ನಿರೂಪಿಸಲು ಸ್ಫೂರ್ತಿದಾಯಕವಾಗಿರುವುದರಿಂದ ಯಕ್ಷ ರಂಗಾಯಣವನ್ನು ಸ್ಥಾಪಿಸಬಹುದಾಗಿರುತ್ತದೆ.**

**ಅವಲೋಕನ–** ಈ ಕುರಿತು ನೋಡಲಾಗಿ ಪಾರಂಪರಿಕ ಕಲೆಯಾದ ಯಕ್ಷಗಾನದ ಕಲೆಯಲ್ಲಿ ತೊಡಗಿಸಿಕೊಂಡ ಸುಮಾರು ಎರಡು ಸಾವಿರಕ್ಕೂ (2000) ಮಿಕ್ಕಿದ ತೆಂಕು ಬಡಗು ಕಲಾವಿದರು ತಮ್ಮ ಪ್ರತಿಭೆಯನ್ನು ನಿರೂಪಿಸಿ ವೃತ್ತಿಪರರಾಗಿ ದುಡಿಯುತ್ತಿದ್ದಾರೆ. ಮೊದಲಿಗೆ ಅವರ ಕ್ಷೇಮ ನೋಡುವತ್ತ ಸರಕಾರ ಗಮನ ಹರಿಸುವ ಅಗತ್ಯ ಇದೆ.

**ಇಷ್ಟಕ್ಕೂ ರಂಗಾಯಣದ ಮೂಲ ಆಶಯ ಏನು, ನೋಡುವ ... (ವೆಬ್ ಸೈಟ್ ನಲ್ಲಿ ಕಂಡ ಹಾಗೆ)**

ಕರ್ನಾಟಕ ಸರ್ಕಾರ 1989ರಲ್ಲಿ ಅಸ್ತಿತ್ವಕ್ಕೆ ತಂದ ರಂಗಾಯಣ ದಿವಂಗತ ಬಿ.ವಿ. ಕಾರಂತರ ಕನಸಿನ ಕೂಸು. 1994ರಲ್ಲಿ ರಂಗಸಮಾಜ ಅಸ್ತಿತ್ವಕ್ಕೆ ಬಂದಾಗಿನಿಂದ ರಂಗಾಯಣದ ಕಾರ್ಯ ಚಟುವಟಿಕೆಗಳಿಗೆ ಗರಿಮೂಡಿತು. ರಂಗಸಮಾಜದ ಉದ್ದೇಶಗಳಿವು:

ರಂಗಾಯಣದ ರೀತಿಯಲ್ಲೇ ಗುರಿ ಹೊಂದಿದ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಸಂಸ್ಥೆಗಳ ಮಟ್ಟಕ್ಕೆ ರಂಗಾಯಣವನ್ನು ಕೊಂಡೊಯ್ಯುವುದು

ರಂಗಾಯಣವನ್ನು ಕರ್ನಾಟಕದ ಪ್ರಾತಿನಿಧಿಕ ರೆಪರ್ಟರಿಯನ್ನಾಗಿ ರೂಪಿಸುವುದು

'ವನರಂಗ', 'ಮಿನಿ ರಂಗಮಂದಿರ', 'ದುಂಡು ಕಣ', ಮತ್ತು 'ಚಿಣ್ಣರ ರಂಗಭೂಮಿ'ಗಳನ್ನು ಸ್ಥಾಪಿಸುವುದು

ರಂಗಭೂಮಿ ತಜ್ಞರು, ಸಂಶೋಧಕರು, ನಾಟಕಕಾರರು, ನಿರ್ದೇಶಕರು, ಕಲಾವಿದರು, ಹಾಗೂ ರಂಗತಂಡಗಳನ್ನು ಆಹ್ವಾನಿಸುವುದು; ರಂಗಶಿಬಿರಗಳು, ನಾಟಕ ರಚನೆ, ಮತ್ತು ನಿರ್ದೇಶನವನ್ನೇರ್ಪಡಿಸುವುದು; ವಿಚಾರ ಸಂಕಿರಣಗಳು, ಸಮ್ಮೇಳನಗಳು, ನಾಟಕೋತ್ಸವ, ಮತ್ತು ಪ್ರದರ್ಶನಗಳನ್ನು ಏರ್ಪಡಿಸುವುದು

ರಂಗಭೂಮಿಯಲ್ಲಿ ಆಸಕ್ತಿ ಇರುವವರನ್ನೆಲ್ಲ ಒಟ್ಟುಗೂಡಿಸಿ ತರಬೇತಿಯ ಮೂಲಕ ಅವರನ್ನು ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡುವುದು

ರಂಗಭೂಮಿಗೆ ಸಂಬಂಧಿಸಿದ ಪರಿಕರಗಳ ಸಂಗ್ರಹಣೆ; ಲೇಖನಗಳು, ಪುಸ್ತಕಗಳು, ಹಾಗೂ ಪತ್ರಿಕೆಗಳಿಂದ ಸಂಶೋಧನೆಯನ್ನು ನಡೆಸುವುದು; ಹೊಸ ನಾಟಕಗಳನ್ನು ಪ್ರಕಟಿಸುವುದು; ಇತರ ಭಾಷೆಗಳಿಂದ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸುವುದು

'ರಂಗ ಮಾಹಿತಿ ಕೇಂದ್ರ'ವನ್ನು ಸ್ಥಾಪಿಸುವುದು

ಇದೇ ರೀತಿ ಆಸಕ್ತಿ ಹೊಂದಿರುವ ವ್ಯಕ್ತಿಗಳು ಹಾಗೂ ಸಂಘಟನೆಗಳೊಂದಿಗೆ ಸಂಪರ್ಕ ಸಾಧಿಸಿ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಬಂಧವನ್ನು ಕುದುರಿಸುವುದು

ಆರಂಭದಲ್ಲಿಯೇ ರಂಗಾಯಣದ ನಾಲ್ಕು ರೆಪರ್ಟರಿಗಳನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಲಾಯಿತು: ಮೈಸೂರು ರಂಗಾಯಣ, ಕರಾವಳಿ ರಂಗಾಯಣ, ಮಲೆನಾಡು ರಂಗಾಯಣ, ಮತ್ತು ಹೈದರಾಬಾದ್–ಕರ್ನಾಟಕ ರಂಗಾಯಣ. ಅವುಗಳನ್ನು ಸ್ಥಾಪಿಸುವ ಮೂಲಕ ಪ್ರಾದೇಶಿಕ ಭಾಷೆ ಮತ್ತು ಸಂಸ್ಕೃತಿಯ ಸೊಗಡನ್ನು ಜೀವಂತವಾಗಿಡುವ ಪ್ರಯತ್ನ ಇದಾಗಿದೆ. ಶಿವಮೊಗ್ಗ, ಧಾರವಾಡ, ಮತ್ತು ಕಲಬುರಗಿ ರಂಗಾಯಣ ಕೇಂದ್ರಗಳು ಈಗಾಗಲೇ ಕಾರ್ಯಾರಂಭ ಮಾಡಿವೆ. ಇಲ್ಲಿ ತಿಳಿಸಿದಂತೆ ರಂಗಾಯಣ ಅನ್ನುವ ಸಂಸ್ಥೆಯ ಉದ್ದೇಶ ನಾಟಕ ರಂಗ ಭೂಮಿಯ ಚಟುವಟಿಕೆಗಳ ಕುರಿತಾಗಿ ಇದ್ದದ್ದೇ ಹೊರತು ಯಕ್ಷಗಾನದ ರಂಗ ಚಟುವಟಿಕೆಗಳನ್ನು ನಿರ್ದೇಶಿಸುವ ಗುರಿ ಹೊಂದಿರುವುದಲ್ಲ. ಹಾಗಿರುವಾಗ ಉಡುಪಿ ಜಿಲ್ಲೆಯಲ್ಲಿ ಈಗಾಗಲೇ ಮೇಳವೆಂಬ ಸಾಂಸ್ಥಿಕರೂಪದ ಮೂಲಕ ಪೂರ್ಣಪ್ರಮಾಣದ ರಂಗಚಟುವಟಿಕೆಯನ್ನು ಹೊಂದಿರುವ ಯಕ್ಷಗಾನಕಲೆಗೆ ಯಕ್ಷರಂಗಾಯಣ ಅನ್ನುವ ಸಂಸ್ಥೆಯ ಕಲ್ಪನೆ ಎಲ್ಲಿಂದ ಬಂತು? ಅದು ಮೇಲೆ ತಿಳಿಸಿದ ರಂಗಾಯಣದ ಆಶಯದಂತೆ ನಾಟಕ ರಂಗಭೂಮಿಗೆ ಅನ್ವಯಿಸಿ 'ಕರಾವಳಿ ರಂಗಾಯಣ" ಎನ್ನುವ ಹೆಸರಿನಿಂದ ಸ್ಥಾಪನೆಯಾಗುವ ಯೋಜನೆ ಈ ಮುಂಚೆಯೇ ಹೊಂದಿತ್ತು ತಾನೇ? ಈ ನಾಮಾಂತರ ಯಾಕೆ ಆಯಿತು ಹೇಗೆ ಆಯಿತು? ಯಾರಿಂದ ಆಯ್ತು? ಎಲ್ಲವೂ ಒಂದಷ್ಟು ನಿಗೂಢ..??




**ಚಿತ್ರ ಕೃಪೆ: ಆರಾಟೆ ಗಣೇಶ್**

ಉಡುಪಿಯಲ್ಲಿ ರಂಗಾಯಣ ಸ್ಥಾಪನೆಗೊಳ್ಳುವ ಮೂಲಕ ಉಡುಪಿ ಜಿಲ್ಲೆಯವರಾದ ದಿವಂಗತ ಬಿ. ವಿ. ಕಾರಂತರ ಕನಸು ಸಾಕಾರವಾಗಿರುವುದು ಸ್ವಾಗತಾರ್ಹ ವಿಚಾರ. ಆದರೇ ಯಕ್ಷರಂಗಾಯಣ ಸ್ಥಾಪನೆಯಾಗುವ ಕುರಿತು ಸಲ್ಲಿಸಿದ ಪ್ರಸ್ತಾವನೆಯಲ್ಲಿ ಮೂಲ ರಂಗಾಯಣದ ಆಶಯದಂತೆ ನಾಟಕರಂಗದ ಚಟುವಟಿಕೆಗಳ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ಬದಲಿಗೆ ಯಕ್ಷಗಾನ ಚಟುವಟಿಕೆ ಬಗ್ಗೆ ಉಲ್ಲೇಖವಿದೆ. ಮುಂದೆ ಇಲ್ಲಿ ನಡೆಯುವ ಚಟುವಟಿಕೆಗಳು ನಾಟಕರಂಗದ ಕುರಿತು ಆದಲ್ಲಿ ಸಂತೋಷ. ಅದು ಬಿಟ್ಟು ಈ ಸಂಸ್ಥೆಯ ಮೂಲಕ ವಿಭಿನ್ನ ಪ್ರಕಾರಗಳಾಗಿರುವ ಯಕ್ಷಗಾನಕಲೆ ಹಾಗೂ ನಾಟಕಕಲೆಯನ್ನು ಪರಸ್ಪರ ಬೆಸೆದು ಏನೋ ಒಂದು ಕಲಸು ಮೇಲೋಗರ ಪ್ರಕಾರವಾದಲ್ಲಿ ಆ ಎರಡೂ ಪ್ರಕಾರಗಳು, ತಮ್ಮ ಅಸ್ಮಿತೆಯನ್ನು ಕಳೆದುಕೊಳ್ಳುವ ಅಪಾಯವಿದೆ. ಆ ರೀತಿಯ ಚಟುಟಿಕೆಗಳಿಗೆ ಅವಕಾಶ ಆಗಬಾರದು ಅಂತಾದರೆ, ಉಡುಪಿಯಲ್ಲಿ ಯಕ್ಷಗಾನ ಕೇಂದ್ರ ಸ್ಥಾಪನೆ ಮಾಡಿ, ಯಕ್ಷಗಾನ ಕಲೆಗೆ ಕಾಯಕಲ್ಪ ನೀಡುವ ಮೂಲಕ ಯಕ್ಷಗಾನ ಕಲೆಯ ಕಂಪನ್ನು ವಿಶ್ವದೆಲ್ಲೆಡೆ ಪಸರಿಸಿದ ಕೀರ್ತಿ ಉಡುಪಿ ಜಿಲ್ಲೆಯವರೇ ಆದ ದಿವಂಗತ ಕೋಟ ಶಿವರಾಮ ಕಾರಂತರ ಆಶಯದ ಪ್ರಕಾರ ಯಕ್ಷಗಾನ ಕಲೆಯ ತೆಂಕು ಹಾಗೂ ಬಡಗು ಉಭಯ ತಿಟ್ಟಿನ ಕುಣಿತ, ಅಭಿನಯ ,ಬಣ್ಣಗಾರಿಕೆ, ಕುರಿತಾದ ವಿಚಾರ ಗಳ ಅಕಾಡೆಮಿಕ್ ಅಧ್ಯಯನಕ್ಕಾಗಿ ಪ್ರತ್ಯೇಕವಾದ ರೆಪರ್ಟರಿಯನ್ನು ಸ್ಥಾಪಿಸುವ ಮೂಲಕ ಶಿವರಾಮ ಕಾರಂತರ ಆಶಯವನ್ನು ಸಾಕಾರ ಗೊಳಿಸಿದಂತಾಗುತ್ತದೆ. ಉಡುಪಿಯಲ್ಲಿ ಈ ಯಕ್ಷರಂಗಾಯಣದ ಮೂಲಕ ಕರಾವಳಿ ಪ್ರಾಂತ್ಯದ ರಂಗಕರ್ಮಿಗಳಿಗೆ ಅನುಕೂಲವಾಗುವುದರ ಜೊತೆಗೆ ಯಕ್ಷಗಾನ ರೆಪರ್ಟರಿ ಸ್ಥಾಪನೆಯಾಗಿ ಕಾರ್ಯ ನಿರ್ವಹಿಸುವ ಮೂಲಕ ಯುವ ಪೀಳಿಗೆಗೆ ಯಕ್ಷಗಾನ ಕಲೆಯನ್ನು ಅಕಾಡೆಮಿಕ್ ಆಗಿ ಕಲಿಯಲು ಅವಕಾಶವಾಗಿ ಯಕ್ಷಗಾನ ಕಲೆಯ ಅಸ್ಮಿತೆಯನ್ನು ಉಳಿಸಿ ಬೆಳೆಸುವಲ್ಲಿ ಆಸಕ್ತ ಯುವಕರಿಗೂ ಅನುಕೂಲವಾಗುತ್ತದೆ. ಈ ವಿಷಯಗಳನ್ನು ಗಮನದಲ್ಲಿರಿಸಿಕೊಂಡು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಗಳಾದ ಶ್ರೀ ಸುನಿಲ್ ಕುಮಾರ್ ರವರು ಉಡುಪಿ ಜಿಲ್ಲೆಯಲ್ಲಿ ಆದಷ್ಟು ಬೇಗ ಯಕ್ಷಗಾನ ರೆಪರ್ಟರಿಯನ್ನು ಸ್ಥಾಪಿಸುವ ಮೂಲಕ ಯಕ್ಷಗಾನ ಕ್ಷೇತ್ರದ ಅಸ್ಮಿತೆಯನ್ನು ಉಳಿಸಿ ಬೆಳೆಸುವಲ್ಲಿ ಮನ ಮಾಡಲಿ ಎಂಬುದು ನಮ್ಮ ಆಶಯ

**ಲೇಖಕರು–ಸುರೇಂದ್ರ ಪಣಿಯೂರು, ಯಕ್ಷಗಾನ ಭಾಗವತ, ಯಕ್ಷಗಾನ ಮೇಳದ ಯಜಮಾನರು (ಮಾಜಿ)**

## ಸಂಘಟಕರಿಗೆ ಭಾರವಾಯಿತೇ ವೀಳ್ಯ??



ಎಂ.ಶಾಂತರಾಮ ಕುಡ್ವ

ಇಂದು ಯಕ್ಷಗಾನ ಮೇಳಗಳ ವೀಳ್ಯವು, ಹಿಂದಿನ ಕಾಲಕ್ಕೆ ಹೋಲಿಸಿದರೆ, ಸ್ವಲ್ಪ ಮಟ್ಟಿಗೆ ದುಬಾರಿಯೇ ಹೌದು. ಒಂದೊಂದು ಮೇಳಗಳ ವೀಳ್ಯವು ಬೇರೆ ಬೇರೆ ರೀತಿಯಲ್ಲೇ ಇದೆ. ಆದರೆ ಇದಕ್ಕೆ ಕಾರಣವೂ ಇದೆ. ಇಂದು ಎಲ್ಲಾ ವಸ್ತುಗಳ ಬೆಲೆ ಏರಿಕೆಯಾಗಿದೆ, ಕಲಾವಿದರ ವೇತನವೂ ಜಾಸ್ತಿಯಾಗಿದೆ, ಜೀವನ ಮಟ್ಟದ ಸೂಚ್ಯಾಂಕವೂ ಏರಿದೆ. ಹಾಗಿರುವಾಗ ವೀಳ್ಯವು ದುಬಾರಿಯಾಗಲೇಬೇಕಾಗುತ್ತದೆ. 1990 ರ ದಶಕದಲ್ಲಿ ಮೇಳವೊಂದರ ಸರಾಸರಿ ವೀಳ್ಯವು ರೂ 8000 ದಿಂದ18000 ಇತ್ತು. ಆದರೆ ಈಗಿನ ಬೇರೆ ಬೇರೆ ಮೇಳಗಳ ವೀಳ್ಯವು ರೂ 50000 ದ 90000 ವರೆಗೂ ಇದೆ. ಈ ವೀಳ್ಯವು ಯಕ್ಷಗಾನ ಪ್ರದರ್ಶನಗಳ ಸಂಖ್ಯೆಯ ಮೇಲೆ ಪರಿಣಾಮ ಬೀರುತ್ತಿರುವುದು ಸುಳ್ಳಲ್ಲ. ವರ್ಷವಿಡೀ ಹರಕೆ ಬಯಲಾಟದ ಬಲದಿಂದ ಆಟ ಆಡಿಸುವ ಮೇಳಗಳಿಗೆ ಇದರಿಂದ ಪರಿಣಾಮ ಆಗಲಾರದು .ಏಕೆಂದರೆ , ಹರಕೆ ಆಟ ಆಡಿಸುವ ಸೇವಾದಾರರು , ದೇವರ ಬೆಳಕು ಸೇವೆ , ತಮ್ಮ ಹರಕೆ ಪೂರೈಕೆ ಎಂಬ ನೆಲೆಯಲ್ಲಿ ವೀಳ್ಯದ ಮೊತ್ತದ ಬಗ್ಗೆ ಚಿಂತಿಸಲಾರರು . ಆದರೆ, ಸಂಘ ಸಂಸ್ಥೆಗಳ ಸಾಮೂಹಿಕ ಪೂಜೆ, ವಾರ್ಷಿಕೋತ್ಸವ, ಪೋಷಕರ ಕಲಾಭಿಮಾನದ ಬಲದಿಂದಲೇ ಬಯಲಾಟ ಆಡಿಸುವ ಅನೇಕ ಮೇಳಗಳು ದುಬಾರಿ ವೀಳ್ಯದಿಂದಾಗಿ ಬಹಳಷ್ಟು ಪ್ರಾಯೋಜಕರ ಬೆಂಬಲ ಕಳಕೊಂಡಿದೆ ಎನ್ನುವುದು ವಾಸ್ತವಿಕ. ಇದು ಯಾವ ರೀತಿಯಲ್ಲಿ ಪರಿಣಾಮ ತಂದಿದೆಯೆಂದರೆ, ಕೆಲವೊಂದು ಹರಕೆ ಮೇಳಗಳಿಗೆ ಕೆಲವೊಂದು ದಿನಗಳು ಪ್ರದರ್ಶನ ಇಲ್ಲದೇ, ಯಕ್ಷಗಾನದ ಅಭಿಮಾನಿಗಳು ಅಥವಾ ತಮ್ಮ ಮೇಳದ ಅಭಿಮಾನಿಗಳು ಹೆಚ್ಚು ಇರುವ ಸ್ಥಳಗಳಲ್ಲಿ ತಮ್ಮ ಸ್ವಂತ ಕ್ಯಾಂಪ್ ಹಾಕಿ ಅಭಿಮಾನಿಗಳ ಧನ ಸಹಾಯದ ನೆರವು ಕೋರಿ, ಪ್ರದರ್ಶನ ನೀಡುವ ಉಪಾಯ ಕಂಡುಕೊಂಡಿದೆ. ಆದರೆ, ಇಂತಹ ಪ್ರದರ್ಶನಗಳಲ್ಲಿ ನಿರೀಕ್ಷಿತ ಮಟ್ಟದ ನೆರವು ಬಾರದಿದ್ದ ಉದಾಹರಣೆಯೇ ಅಧಿಕ. ಈ ಬೆಳವಣಿಗೆಯು ಪ್ರಾಯೋಜಕರ ಅಥವಾ ಆಯೋಜಕರ ವಿಮುಖತೆ ಎನ್ನಬಹುದೇನೋ? ಇದಕ್ಕೆ ಇನ್ನಿತರ ಕಾರಣಗಳೊಂದಿಗೆ ದುಬಾರಿ ವೀಳ್ಯವೂ ಕಾರಣವೆನ್ನಬಹುದು. ವೀಳ್ಯವು ದುಬಾರಿಯಾಗಲು ಅಧಿಕ ದೈನಂದಿನ ವೆಚ್ಚದೊಂದಿಗೆ ಕಲಾವಿದರಿಗೆ ನೀಡುವ ಸಂಭಾವನೆಯೂ ಪ್ರಮುಖ ಕಾರಣ ಎಂಬುದು ಯಕ್ಷಗಾನ ಮೇಳಗಳ ಯಜಮಾನರ ಅಭಿಪ್ರಾಯ. ಹೆಚ್ಚಿನ ಪ್ರದರ್ಶನ ಸಿಗಬೇಕಾದರೆ, ಉತ್ತಮ ಕಲಾವಿದರೂ ಇರಬೇಕಾಗುತ್ತದೆ. ಆದರೆ ಇಂತಹ ಉತ್ತಮ ಕಲಾವಿದರಿಗೆ ಅಧಿಕ ಬೇಡಿಕೆ ಇರುವ ಕಾರಣ, ಅವರನ್ನು ಸೆಳೆಯಲು ಯಜಮಾನರು, ಹೆಚ್ಚಿನ ಸಂಭಾವನೆ ನೀಡಿ ತಮ್ಮ ಮೇಳಕ್ಕೆ ಸೇರ್ಪಡೆಗೊಳಿಸುತ್ತಾರೆ. ಇಂತಹ ಬೇಡಿಕೆಯ ಕಲಾವಿದರ ಸಂಭಾವನೆಯು ದಿನವೊಂದಕ್ಕೆ ರೂ 2500 ದಿಂದ 3000 ದ ವರೆಗೂ ಇದೆ ಎಂಬುದನ್ನು ಮೇಳದ ಯಜಮಾನರೊಬ್ಬರು ಹೇಳಿದ ನೆನಪು. ಇಂತಹ ಬೇಡಿಕೆಯ

ಬೆರಳೆಣಿಕೆಯ ಕಲಾವಿದರಿಗಾಗಿಯೇ, ತನ್ನ ವೀಳ್ಯದ ಅರ್ಧ ಭಾಗ ವೆಚ್ಚವಾಗುತ್ತದೆ ಎಂಬುದನ್ನೂ ಈ ಯಜಮಾನರು ಹೇಳುತ್ತಾರೆ. ವೈಯಕ್ತಿಕವಾಗಿ ನನ್ನ ಅನಿಸಿಕೆ ಎಂದರೆ, ಯಾವುದೇ ಕಲೆಯನ್ನೂ ಮುಂದಿನ ಪೀಳಿಗೆಗೆ ಕೊಂಡೊಯ್ಯಬಲ್ಲ ಸಾಮರ್ಥ್ಯದ ಕಲಾವಿದರಿಗೆ ಎಷ್ಟೇ ಕೊಟ್ಟರೂ ಅದು ಕಡಿಮೆಯೇ ಹೌದು. ಆದರೆ ವಸ್ತುಸ್ಥಿತಿಯನ್ನು ವಸ್ತುನಿಷ್ಠವಾಗಿ ಪರಿಗಣಿಸುವಾಗ, ಕಲಾವಿದರ ವೇತನವು ಮೇಳದ ಯಜಮಾನರಿಗೂ, ಆಯೋಜಕರಿಗೂ ಕಠಿಣ ಸವಾಲು ಒಡ್ಡಿದೆ. ಒಂದು ಕಾಲದಲ್ಲಿ ಮಂಗಳೂರಿನ ಪುರಭವನದಲ್ಲಿ ಮಳೆಗಾಲದ ಪ್ರತೀ ಶನಿವಾರ ಹಾಗೂ ಭಾನುವಾರ ಜರುಗುತ್ತಿದ್ದ ಯಕ್ಷಗಾನ ಕಾರ್ಯಕ್ರಮಗಳು ಅದೆಷ್ಟೋ. ಆದರೆ ಇದೀಗ ಬೆರಳೆಣಿಕೆಯಷ್ಟು. ಈ ಬಗ್ಗೆ ಹಿಂದೆ ಹಲವಾರು ವರ್ಷಗಳಿಂದ ಮಂಗಳೂರಿನ ಪುರಭವನದಲ್ಲಿ ಯಕ್ಷಗಾನ ಪ್ರದರ್ಶನ ಸಂಘಟಿಸುತ್ತಿದ್ದ ಕೆಲವೊಂದು ಆಯೋಜಕರ ಅಭಿಪ್ರಾಯ " ಗೇಟ್ ಕಲೆಕ್ಷನ್ ನಂಬಿದರೆ, ಕೇವಲ ಕಲಾವಿದರ ಸಂಭಾವನೆಗೂ ಸಾಲದು. ಹಾಗಾಗಿ ನಾನು ಇತ್ತೀಚೆಗೆ ಪುರಭವನದಲ್ಲಿ ಯಕ್ಷಗಾನ ಪ್ರದರ್ಶನ ಹಮ್ಮಿಕೊಳ್ಳುವುದನ್ನೇ ಬಿಟ್ಟಿದ್ದೇನೆ. " ಹಾಗೆಂದು ಯಕ್ಷಗಾನ ಕಲಾವಿದರಿಗೆ ಸಂಭಾವನೆ ಕಡಿಮೆ ಕೊಡಲು ಆದೀತೇ? ಆದರೆ, ಅರ್ಥಶಾಸ್ತ್ರದಲ್ಲಿ ಒಂದು ಮಾತುಂಟು "ಹೆಚ್ಚು ಲಾಭವಿಟ್ಟು ಕಡಿಮೆ ವ್ಯಾಪಾರ ಮಾಡುವುದಕ್ಕಿಂತಲೂ, ಕಡಿಮೆ ಲಾಭ ಇಟ್ಟು ಹೆಚ್ಚು ವ್ಯಾಪಾರ ಗಳಿಸುವುದು ಜಾಣತನ. " ಇದು ಕಲಾಪ್ರಾಕಾರಕ್ಕೂ, ಕಲಾವಿದರಿಗೂ ಅನ್ವಯಿಸಿಸಬಹುದೇನೋ?



ಈ ವರ್ಷದ ಡೇರೆ ಮೇಳಗಳ ತಿರುಗಾಟದಲ್ಲಿ ಮೇಳದ ವೀಳ್ಯವು ಪ್ರದರ್ಶನದ ದೃಷ್ಟಿಯಿಂದ ತುಂಬಾ ಪರಿಣಾಮ ಬೀರಿದೆ ಎನ್ನಬಹುದು. ಪ್ರಸ್ತುತ ಡೇರೆ ಮೇಳಗಳು ಇರುವುದು ಕೇವಲ ಎರಡು ಮಾತ್ರ .ಆದರೆ, ಈ ಡೇರೆ ಮೇಳಗಳು ಈ ವರ್ಷದ ತಿರುಗಾಟದಲ್ಲಿ ಸುಮಾರು 60 ಪ್ರದರ್ಶನ ಕಳಕೊಂಡಿದೆ. ಇದಕ್ಕೆ ಮೇಳದ ದುಬಾರಿ ವೀಳ್ಯದೊಂದಿಗೆ, ರಾತ್ರಿ ಕರ್ಫ್ಯೂ ಕೂಡ ಕಾರಣ ಇರಬಹುದು. ಆಯೋಜಕರು ಇಲ್ಲದಾಗ, ಮೇಳಗಳು ಸ್ವಂತ ಕ್ಯಾಂಪ್ ಹಾಕುವುದು ಸ್ವಾಭಾವಿಕ. ಆದರೆ, ಈ ತಿರುಗಾಟದಲ್ಲಿ ಮೇಳಗಳು, ಕಲೆಕ್ಷನ್ ದೃಷ್ಟಿಯಿಂದ, ಸ್ವಂತ ಕ್ಯಾಂಪ್ ಹಾಕುವ ಧೈರ್ಯ ತೋರಲಿಲ್ಲ . ಏಕೆಂದರೆ, ಕಲೆಕ್ಷನ್ ನಿರೀಕ್ಷಿತ ಮಟ್ಟದಲ್ಲಿ ಇರುವ ಯಾವುದೇ ವಿಶ್ವಾಸವಿಲ್ಲ. ಆಯೋಜಕರು ಹಾಗೂ ಪ್ರಾಯೋಜಕರೂ, ಈ ಕಾರಣದಿಂದಲೇ ಹಿಮ್ಮೆಟ್ಟಿದರು ಎನ್ನಬಹುದೇನೋ? ಇತ್ತೀಚಿನ ತಾಳಮದ್ದಳೆ ಕೂಟಗಳಲ್ಲಿ ಹವ್ಯಾಸೀ ಕಲಾವಿದರಿಗೆ ಹೆಚ್ಚಿನ ಅವಕಾಶ ಸಿಗುತ್ತಿರುವುದು ಗಮನಾರ್ಹ. ಹವ್ಯಾಸಿ ಕಲಾವಿದರಿಗೆ ನೀಡಬೇಕಾದ ಸಂಭಾವನೆ ಕಡಿಮೆ ಇರಬಹುದು ಎಂಬ ಕಾರಣಕ್ಕಾಗಿ ಹವ್ಯಾಸಿ ಕಲಾವಿದರಿಗೆ ಅವಕಾಶ ನೀಡುತ್ತಿದ್ದಾರೆ ಎಂಬ ವಾದವನ್ನು ನಾನು ಒಪ್ಪುವುದಿಲ್ಲ. ಆದರೆ, ಹವ್ಯಾಸೀ ಕಲಾವಿದರ ಪಾತ್ರ ಚಿತ್ರಣದ ಗುಣಮಟ್ಟವು ಉತ್ತಮ ಮಟ್ಟದಲ್ಲಿ ಇರುವುದೂ ಇದಕ್ಕೆ ಕಾರಣ ಎಂಬುದು ನನ್ನ ಅಭಿಪ್ರಾಯ. ಇತ್ತೀಚಿನ ಹವ್ಯಾಸೀ ಕಲಾವಿದರ ಪ್ರಸ್ತುತಿಯು ಉತ್ತಮ ಗುಣಮಟ್ಟ ಹೊಂದಿದೆ .ಇದನ್ನು ದೊಡ್ಡ ಸವಾಲಾಗಿ ಸ್ವೀಕರಿಸಬೇಕಾದ ಹೊಣೆಗಾರಿಕೆ ವೃತ್ತಿಪರ ಕಲಾವಿದರಲ್ಲೂ ಇರಬೇಕು. ಆದರೆ, ಈ ಹವ್ಯಾಸೀ ಕಲಾವಿದರ ಒಂದು ದೋಷವನ್ನೂ ಉಲ್ಲೇಖಿಸಲೇಬೇಕು. ಕೆಲವೊಂದು ಹವ್ಯಾಸೀ ಕಲಾವಿದರೂ, ದೊಡ್ಡ ಸಂಭಾವನೆಯ ಬೇಡಿಕೆ ಇಡುವ, ದೊಡ್ಡ ಪಾತ್ರಗಳನ್ನು ಅಪೇಕ್ಷಿಸುವ, ಸಹ ಕಲಾವಿದರನ್ನು ಕೀಳರಿಮೆಯಿಂದ ನೋಡುವ ಗುಣವನ್ನೂ ಹೊಂದಿರುವುದು ಖೇದಕರ .ಒಂದು ಸಮಾಧಾನಕರ ವಿಷಯ ಎಂದರೆ, ಹವ್ಯಾಸೀ ಕಲಾವಿದರನ್ನು ವೃತ್ತಿಪರ ಕಲಾವಿದರು, ಯಾವುದೇ ಕೀಳರಿಮೆ ಹೊಂದದೇ, ಸುಧಾರಿಸಿಕೊಂಡು ಹೋಗುತ್ತಿದ್ದಾರೆ. ಈ ನಿಟ್ಟಿನಲ್ಲಿ ಹವ್ಯಾಸೀ ಕಲಾವಿದರು, ವೃತ್ತಿಪರ ಕಲಾವಿದರಿಗೆ ಸದಾ ಕೃತಜ್ಞರಾಗಲೇಬೇಕು ಹಾಗೂ ತಮ್ಮ ದೋಷಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಹವ್ಯಾಸೀ ಕಲಾವಿದರು ಯೋಚಿಸದಿದ್ದರೆ, ಈ ಹವ್ಯಾಸೀ ಕಲಾವಿದರೂ ಮುಂದಕ್ಕೆ ನೇಪಥ್ಯಕ್ಕೆ ಸರಿಯಬೇಕಾಗಬಹುದು ಎಂಬುದು ವಾಸ್ತವಿಕ ವಿಷಯವಾಗಿದೆ.

**ಲೇಖಕರು –ಎಂ.ಶಾಂತರಾಮ ಕುಡ್ವ**

## ಶೀರ್ಷಿಕೆ ಬದಲಾವಣೆ ಎಷ್ಟು ಸರಿ?



ರವಿ ಮಡೋಡಿ

ಜಗತ್ತಿನ ಯಾವುದೇ ರಂಗ ಪ್ರದರ್ಶನವಿರಲಿ, ಸಾಹಿತ್ಯ, ಚಲನಚಿತ್ರ, ಪುಸ್ತಕ, ಕಾವ್ಯ, ನಾಟಕ ಯಾವುದೇ ಇರಲಿ, ಅದಕ್ಕೊಂದು ಶಿರೋನಾಮೆ ಎನ್ನುವುದು ಇದ್ದೇ ಇರುತ್ತದೆ. ಯಾವುದೇ ವಿಷಯಕ್ಕೆ ಸಂಬಂಧಿಸಿ, ಇಡಿಯಾಗಿ ಹಿಡಿದಿಡಬಲ್ಲ ಶಿರೋನಾಮೆಯೂ, ಆ ವಿಷಯದ ಅಂತಃಸತ್ವವನ್ನು ಸೂಚ್ಯವಾಗಿ ತಿಳಿಸಿ ಬಗೆಗೆ ಪ್ರೇಕ್ಷಕ/ಓದುಗ/ನೋಡುಗನಿಗೊಂದು ಮಾನಸಿಕವಾಗಿ ಆ ಬಗೆಯಲ್ಲಿ ಯೋಚಿಸುವಂತೆ ಮಾಡುವುದು ಶಿರೋನಾಮೆಯ ಉದ್ದೇಶವಾಗಿದೆ. ಹೀಗಾಗಿ ಕಥೆ, ಕಾದಂಬರಿ, ನಾಟಕ, ಚಲನಚಿತ್ರ ಯಾವುದೇ ಇರಲಿ, ಅಲ್ಲಿ ತಲೆಬರಹ ಮುಖ್ಯವಾಗುತ್ತದೆ. ಇದು ನಮ್ಮ ಯಕ್ಷಗಾನಕ್ಕೂ ಕೂಡ ಹೊರತಲ್ಲ. ಆದರೆ ಇತ್ತೀಚಿನ ಯಕ್ಷಗಾನ ಕಾರ್ಯಕ್ರಮದ ಆಹ್ವಾನ ಪತ್ರಿಕೆಗಳಲ್ಲಿ ದೊಡ್ಡ ಬದಲಾವಣೆಯಾಗುತ್ತಿರುವುದನ್ನು ಕಾಣಬಹುದಾಗಿದೆ. ಅಲ್ಲಿ ಪ್ರಸಂಗದ ಕವಿಯ ಹೆಸರನ್ನು ನಮೂದಿಸದೇ ಇರುವುದು ಒಂದು ಬಗೆಯ ದೋಷವಾದರೆ, ಕವಿ ಕೊಟ್ಟ ಪ್ರಸಂಗದ ಹೆಸರನ್ನು ಬದಲಾಯಿಸಿ ಮತ್ತೊಂದು ಹೆಸರನ್ನು ನೀಡುತ್ತಿರುವುದು ಸ್ವೇಚ್ಛಾಚಾರದ ಕ್ರಮವೆಂದು ಭಾವಿಸಬಹುದು.

ಅದೊಂದು ಯಕ್ಷಗಾನ ಕಾರ್ಯಕ್ರಮದ ಆಹ್ವಾನ ಪತ್ರ. ಆ ಪ್ರದರ್ಶನಕ್ಕೆ ಸಂಘಟಕರು ಕೊಟ್ಟ ಹೆಸರು 'ವಿಜ್ರಂಭಾಕಸ್ತ್ರ ಪ್ರಯೋಗ' ಎಂದು. ಈ ಹೆಸರನ್ನು ಕೇಳುವಾಗ ಅಯ್ಯೋ ಇಂತಹ ಪ್ರಸಂಗ ಇರುವ ಬಗ್ಗೆ, ಆ ಹೆಸರನ್ನು ಕೇಳಿರುವ ಬಗ್ಗೆ ನಮಗೆ ಅನುಮಾನ ಕಾಡುವುದು ಸುಳ್ಳಲ್ಲ. ಜೊತೆಗೆ ಇದು ಯಾವ ಪ್ರಸಂಗವೆಂದು ಕುತೂಹಲಕ್ಕೆ ಒಳಗಾಗುವುದು ಖಂಡಿತ. ಆದರೆ ಇದೇ ಕುತೂಹಲವನ್ನು ಆಧರಿಸಿ ಪ್ರದರ್ಶನಕ್ಕೆ ಹೋದರೆ, ಪ್ರಸಂಗದ ಹೆಸರಿನಲ್ಲಿ ಭ್ರಮನಿರಸನವಾದರೆ ಅಚ್ಚರಿಯಿಲ್ಲ. ಏಕೆಂದರೆ ಇದು ರಂಗದಲ್ಲಿ ಹಲವು ಬಾರಿ ಪ್ರಯೋಗವನ್ನು ಕಂಡಿರುವ ಎಮ್. ಎ ಹೆಗಡೆಯವರು ರಚಿಸಿದ ಲವಕುಶ–ಸೀತಾ ವಿಯೋಗ ಪ್ರಸಂಗವೇ ಆಗಿರುತ್ತದೆ. ಇಂದು ನಿತ್ಯವೂ ಇಂತಹ ಪ್ರಸಂಗಳ ಹೆಸರು ಬದಲಾವಣೆಯ ಅವಾಂತರಗಳನ್ನು ಆಹ್ವಾನ ಪತ್ರಿಕೆಯಲ್ಲಿ ಕಾಣುತ್ತಿದ್ದೇವೆ. ಇಲ್ಲಿ ಕೆಲವೊಂದು ಪ್ರಸಂಗ ಬದಲಾವಣೆಯ ಉದಾಹರಣೆಗಳನ್ನು ನೋಡೋಣ. ಬೇಡರ ಕಣ್ಣಪ್ಪ ಪ್ರಸಂಗಕ್ಕೆ ರಾಣಿಗೆ ಕೈ ಕೊಟ್ಟ ಮಾಣಿ ಅಥವಾ ಕಿತಾಪತಿ ಮಾಣಿ, ಅಭಿಮನ್ಯು ಕಾಳಗಕ್ಕೆ ಸಿಡಿಲಮರಿ, ಭಾರತ ರತ್ನ, ಜಾಂಬವತಿ ಕಲ್ಯಾಣ ಅಥವಾ ಮೈಂದ ದ್ವಿವಿದಕ್ಕೆ ಶ್ರೀರಾಮ ದರ್ಶನ, ದ್ರೌಪದಿ ಪ್ರತಾಪಕ್ಕೆ ಯಾಜ್ಞಸೇನೆ ಇತ್ಯಾದಿ ಪ್ರಸಂಗಗಳು ಹೆಸರು ಬದಲಾವಣೆಯನ್ನು ಹೊಂದಿವೆ. ಈ ಮೇಲಿನ ಪ್ರಸಂಗಗಳಲ್ಲಿ ಒಂದಷ್ಟು ನೀವೂ ಊಹಿಸಿದರೆ ಪ್ರಸಂಗ ಯಾವುದೆಂದು ಸುಲಭವಾಗಿ ಗುರುತಿಸುವುದಕ್ಕೆ ಸಾಧ್ಯವಿದೆ. ಆದರೆ ಇಲ್ಲಿರುವ ಪ್ರಸಂಗಗಳ ಹೆಸರನ್ನು ನೋಡಿದರೆ ಇದು ಯಾವ ಪ್ರಸಂಗ ಅನ್ನುವುದನ್ನು ಗುರುತಿಸುವುದಕ್ಕೆ ಸಾಧ್ಯವಾಗುವುದೇ ಇಲ್ಲ. ಉದಾಹರಣೆ: 'ಶ್ರೀರಸ್ತು ಶುಭ ಮಸ್ತು','ಶ್ರೀ ಹರಿ ಸಂಧಾನ','ಶ್ರೀವರ ಸ್ತ್ರೀವೇಶ' ಇತ್ಯಾದಿಗಳು ಈ ಪಟ್ಟಿಯಲ್ಲಿ ಸೇರಿವೆ. ಒಟ್ಟಿನಲ್ಲಿ ಇವೆಲ್ಲ ಹೆಸರಿನಲ್ಲಿಯೇ ಸೂಪರ್ ಸಸ್ಪೆನ್ಸ್ ಕೊಟ್ಟ ಪೌರಾಣಿಕ ಪ್ರಸಂಗಗಳು!. ಹಾಗಂತ ಈ ಪ್ರಸಂಗದ ಹೆಸರು ಬದಲಾವಣೆಯಾಗಿರುವುದು ಇಂದು ನಿನ್ನೆಯಿಂದಲ್ಲ. ಬಹಳ ಹಿಂದಿನಿಂದಲೂ ಇಂತಹ ಬದಲಾವಣೆಯನ್ನು ಬೇರೆ ಬೇರೆ ಉದ್ದೇಶಗಳಾಗಿ ಮಾಡುತ್ತಿದ್ದಾರೆ (ಹಿಂದೆ ಕೃಷ್ಣಾರ್ಜುನ ಕಾಳಗಕ್ಕೆ 'ಬಾಂಧವ್ಯದಲ್ಲಿ ಬಿರುಕು' ಎಂಬ ಹೆಸರನ್ನ ಇಟ್ಟು ಪ್ರಯೋಗ ಮಾಡಿದ್ದಾರಂತೆ). ಇಲ್ಲಿ ಬಹಳ ಮುಖ್ಯವಾಗಿ ಪ್ರಸಂಗಗಳ ಹೆಸರನ್ನು ಯಾಕೆ ಬದಲಾಯಿಸಬೇಕು, ಇದರ ಬದಲಾವಣೆ ಅನಿವಾರ್ಯವೇ ಎಂಬ ಪ್ರಶ್ನೆ ನಮ್ಮನ್ನು ಕಾಡಬಹುದು. ಮೇಲ್ನೋಟಕ್ಕೆ ಇದೊಂದು ಕೇವಲ ಗಿಮಿಕ್ ಅಷ್ಟೇ. ಜನ ಆಕರ್ಷಣೆಗಾಗಿ

ಬಿಟ್ಟರೇ ಮತ್ಯಾವ ಸಕಾರಣವು ಈ ಬದಲಾವಣೆಯ ಹಿಂದೆ ಕಾಣಿಸುವುದಿಲ್ಲ. ಪ್ರಸಂಗದ ಯಾವುದೋ ಒಂದು ಸನ್ನಿವೇಶ ಅಥಾವ ಪದ ಪ್ರಯೋಗವೇ ಇಲ್ಲಿ ಪ್ರಸಂಗದ ಹೆಸರನ್ನಾಗಿ ಬಳಸಿಕೊಂಡು ಪ್ರಸಂಗದ ಹೆಸರನ್ನಾಗಿ ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಹಾಗಾದರೆ ಇದರಿಂದ ಏನು ಸಾಧಿಸಬಹುದು ಎಂಬುದು ಮಾತ್ರ ಇದುವರೆಗೂ ಅರ್ಥವಾಗಿಲ್ಲ. ನಮ್ಮ ನಿಜವಾದ ಆದ್ಯತೆಗಳು ರಂಗದ ಉನ್ನತವಾದ ಪ್ರಸ್ತುತಿ ಆಗಿರಬೇಕಿತ್ತು. ಆದರೆ ಇಂತಹ ಸಣ್ಣ ಮಟ್ಟದ ಗಿಮಿಕ್ ಗಳಿಂದ ನಾವು ಪ್ರಯೋಗಗಳನ್ನು ಮಾಡುತ್ತಿರುವುದು ಖೇದಕರ ಸಂಗತಿ. ಈ ಬಗೆಯಲ್ಲಿ ನಮ್ಮ ಆದ್ಯತೆಗಳು ಬದಲಾಗುತ್ತಿರುವುದು ರಂಗಭೂಮಿಯ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆಯಲ್ಲ. ಆದರೆ ಕಟು ವಾಸ್ತವವೆಂದರೆ ಪ್ರಸಂಗಗಳ ಆಶಯವನ್ನು, ರಂಗಕ್ರಿಯೆಯನ್ನು ಎತ್ತರಿಸುವುದಕ್ಕೆ ಇಂತಹ ಗಿಮಿಕ್ ಗಳಿಂದ ಸಾಧ್ಯವಿಲ್ಲ ಎಂಬುದನ್ನು ನಾವೆಲ್ಲ ಅರಿಯಬೇಕಿದೆ.

ಯಕ್ಷಗಾನವು ಒಂದು ರಂಗಭೂಮಿಯಾಗಿ, ಅದರ ಪ್ರಯೋಗ/ಪ್ರದರ್ಶನಗಳಿಂದ ಸೃಜನಾತ್ಮಕವಾದ ಸಂದೇಶ ಸ್ಫುರಿಸುವಂತಿದ್ದರೆ ಮಾತ್ರ ಅದು ಸಾಫಲ್ಯವನ್ನು ಹೊಂದುವುದಕ್ಕೆ ಸಾಧ್ಯವಿದೆ. ಅದಲ್ಲದಿದ್ದರೆ ಅಗ್ಗದ ಮನರಂಜನೆಯ ತಾಣವಾಗಬಹುದು. ಸಾಮಾಜಿಕ ಸ್ವಾಸ್ಥ್ಯ, ಕಳಕಳಿಯನ್ನು ಹೊಂದಿ ಪ್ರಸಂಗವೂ ರಂಗದಲ್ಲಿ ಒಂದು ಉತ್ತಮ ಸಮಾಜ ನಿರ್ಮಾಣದ ಆಶಯವನ್ನು ಹೊಂದಿರಬೇಕಾಗಿರುವುದು ಕಲಾಧರ್ಮವಾಗಿದೆ. ಹೀಗಾಗಿ ಅದರ ಘನೀಕೃತ ಭಾವವೇ ಪ್ರಸಂಗದ ಹೆಸರಾಗಬೇಕಾಗುತ್ತದೆ. ಈ ಕಾರಣಕ್ಕಾಗಿ ಪ್ರಸಂಗದ ಪ್ರಯೋಗದ ಹೆಸರು ಅತ್ಯಂತ ಮಹತ್ವದ್ದಾಗಿದೆ. ಕೇವಲ ಪ್ರಚಾರಕ್ಕಾಗಿ ಬದಲಾಯಿಸುವುದು ಉಚಿತವಲ್ಲವೆಂದು ಭಾವಿಸಬಹುದು. ಒಂದೊಮ್ಮೆ ನಿಮ್ಮ ಪ್ರಯೋಗವು ಪ್ರಸಂಗದ ಆಶಯವನ್ನು ಬದಲಾಯಿಸುವಂತಿದ್ದರೆ, ಅದಕ್ಕಾಗಿ ಪ್ರಸಂಗದ ಹೆಸರು ಬದಲಾಯಿಸುವ ಅನಿವಾರ್ಯತೆಯಿದ್ದರೆ ಆ ಬಗ್ಗೆ ಸ್ಪಷ್ಟನೆಯನ್ನು ನೀಡಿಯೇ ಪ್ರಯೋಗಿಸುವುದು ಗೌರವಯುತವಾದ ನಡವಳಿಕೆಯಾಗಿದೆ. ಈಗ ಬೇಡರ ಕಣ್ಣಪ್ಪ ಪ್ರಸಂಗದ ಹೆಸರನ್ನು 'ರಾಣಿಗೆ ಕೈ ಕೊಟ್ಟ ಮಾಣಿ' ಎಂದು ಕರೆದಾಗ ನಿಜವಾದ ಭಕ್ತಶಿರೋಮಣಿಯಾಗಿ ರಂಜಿಸಿಬೇಕಿದ್ದ ಕಣ್ಣಪ್ಪ ಅಮುಖ್ಯನಾಗಿ, ಯಾವುದೋ ಕಥೆಯ ಭಾಗಕ್ಕೆ ಪೂರಕವಾಗಿದ್ದ ಭಾಗ ಮುಖ್ಯವಾಗಿ ಬಿಡುವ ಅಪಾಯ ಒದಗುತ್ತದೆ. ಇದೊಂದು ಸಮಾಜಕ್ಕೆ ತಪ್ಪು ಸಂದೇಶವನ್ನು ನೀಡಿದಂತಾಗುತ್ತದೆ. ಯಕ್ಷಗಾನದಲ್ಲಿ ಪ್ರದರ್ಶನದಲ್ಲಿ ದುಷ್ಟ ಪಾತ್ರಗಳನ್ನು ವೈಭವೀಕರಿಸುವ ಚಾಳಿ ಬಹಳ ಹಿಂದಿನಿಂದಿಲೂ ಬಂದಿದೆ. ಇದಕ್ಕೆ ಪೂರಕವೆಂಬಂತೆ ಪ್ರಸಂಗಗಳ ಹೆಸರುಗಳನ್ನು ಬದಲಾಯಿಸಿ ಪ್ರಸಂಗದ ಆಶಯವನ್ನೇ ಬುಡಮೇಲು ಮಾಡುತ್ತಿರುವುದನ್ನು ಗಮನಿಸಬಹುದು. ಉದಾಹರಣೆಗೆ ಮಹಾಮಂತ್ರಿ ದುಷ್ಟಬುದ್ಧಿ, ಮಹಾಮಂತ್ರಿ ಕೀಚಕ ಇತ್ಯಾದಿಗಳು ಯಾವ ಸಂದೇಶವನ್ನು ಸಮಾಜಕ್ಕೆ ನೀಡಿದಂತೆ ಆಗುತ್ತದೆ? ಇನ್ನು ಪಟ್ಟಾಭಿಷಿಕ್ತನೇ ಆಗದ ಕೌರವ 'ಛಲದಂಕ ಚಕ್ರೇಶ್ವರ' ಪ್ರಸಂಗದ ಹೆಸರಿನಲ್ಲಿ ಆಗುವುದು ಕೂಡ ಅದರ ಮತ್ತೊಂದು ಸ್ಥಿತಿ.




**ಸಾಂದರ್ಭಿಕ ಚಿತ್ರ**

ಹಾಗಂತ ಎಲ್ಲಾ ಸಮಯದಲ್ಲಿ ಕವಿ ಕೊಟ್ಟ ಶೀರ್ಷಿಕೆಯನ್ನು ಪ್ರಯೋಗದಲ್ಲಿ ಬಳಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕೆಲವೊಮ್ಮೆ ಶೀರ್ಷಿಕೆಯನ್ನು ಬದಲಾಯಿಸುವುದು ಅನಿವಾರ್ಯವಾಗುತ್ತದೆ. ಉದಾಹರಣೆಗೆ ಹಲಸಿನಹಳ್ಳಿ ನರಸಿಂಹಶಾಸ್ತ್ರಿಗಳು ಬರೆದ 'ದೇವಯಾನಿ ಕಲ್ಯಾಣ' ಪ್ರಸಂಗ ಪುಸ್ತಕದಿಂದ ಆಯ್ದು ಕಚ ದೇವಯಾನಿಯನ್ನು ಬಿಟ್ಟುಹೋಗುವ ಸನ್ನಿವೇಶದವರೆಗೆ ಮಾತ್ರ ಪ್ರಯೋಗಿಸುತ್ತಿದ್ದರೆ, ಅಲ್ಲಿ ದೇವಯಾನಿ ಕಲ್ಯಾಣವೆಂದು ಶಿರೋನಾಮೆಯನ್ನು ನೀಡುವುದಕ್ಕೆ ಸಾಧ್ಯವಾಗುವುದಿಲ್ಲ. ಆಗ ಅವರು 'ಕಚ–ದೇವಯಾನಿ' ಅಥವಾ 'ಮೃತ ಸಂಜೀವಿನಿ' ಎಂದೋ ಪ್ರದರ್ಶನವನ್ನು ಕರೆಯಬಹುದು. ಇದಕ್ಕೆ ಮತ್ತೊಂದು ಉದಾಹರಣೆ ಎಂದರೆ ವಿರಾಟಪರ್ವ ಪ್ರಸಂಗ. ಅದನ್ನು 'ಕೀಚಕವಧೆ, ಉತ್ತರನ ಪೌರುಷ ಎಂದು ಪ್ರತ್ಯೇಕವಾಗಿ ಪ್ರದರ್ಶಿಸಿದರೆ ತಪ್ಪಾಗಲಾರದು. ಈ ಬಗ್ಗೆ ಪ್ರಜ್ಞಾಪೂರ್ವಕವಾಗಿ ಯೋಚಿಸಿ ನಿರ್ಧರಿಸುವುದು ಉತ್ತಮವೆನ್ನಬಹುದು.

ಒಂದು ಪ್ರದರ್ಶನದ ಶೀರ್ಷಿಕೆಯು ದೀರ್ಘಕಾಲ ಸ್ಥಿರವಾಗಿದ್ದಲ್ಲಿ ಮತ್ತು ಅದನ್ನು ಬದಲಾಯಿಸಲು ಒಂದು ಒಳ್ಳೆಯ ಕಾರಣ ಇಲ್ಲದಿರುವಾಗ, ಅದನ್ನು ಬದಲಾಯಿಸಬಾರದು. ಬದಲಿಸಲೇ ಬೇಕಿದ್ದರೆ ಸಕಾರಣವನ್ನು ನೀಡಿ ಬದಲಿಸುವುದು ಅತ್ಯಂತ ಒಳ್ಳೆಯ ಉಪಕ್ರಮವೆಂದು ಭಾವಿಸಬಹುದು. ಕವಿ ಬದುಕಿರುವಾಗ ಅವನ ಪ್ರಸಂಗದ ಹೆಸರನ್ನು ಬದಲಾಯಿಸುವುದು ಶಿಷ್ಟಾಚಾರದ ಕ್ರಮವಲ್ಲ. ಕವಿಯು ಬರೆದ ಪ್ರಸಂಗದ ಪದ್ಯಗಳನ್ನು ತಿರುಚಿ ಬದಲಾಯಿಸುವುದು, ಪ್ರಸಂಗದಲ್ಲಿರುವ ಕತೆಯನ್ನೇ ತಮಗೆ ಸರಿ ಕಂಡಂತೆ ಬದಲಾಯಿಸಿ ಆಡುವುದು, ಪ್ರಸಂಗದ ಪದ್ಯದಲ್ಲಿ ಇರುವುದಕ್ಕೆ ವಿರುದ್ಧವಾಗಿ ವೇಷ ಮಾಡುವುದು ಇತ್ಯಾದಿಗಳು ಕೂಡ ನಮ್ಮ ಸ್ವೇಚ್ಛಾಚಾರದ ಮತ್ತೊಂದು ಉದಾಹರಣೆಯಾಗಿದೆ. ಕವಿಯ ಒಪ್ಪಿಗೆಯಿಲ್ಲದೇ ಪ್ರಸಂಗವನ್ನು ಬದಲಿಸುವುದು, ಆಶಯವನ್ನು ಬದಲಿಸುವುದು ಕಾನೂನಿನ ಪ್ರಕಾರ ಅಪರಾಧವೂ ಆಗಬಹುದು. ಈ ಬಗೆಯಲ್ಲಿ ನಾವು ಇನ್ನಷ್ಟು ಯೋಚಿಸೋಣ.

**ಲೇಖಕರು–ರವಿ ಮಡೋಡಿ, ಬೆಂಗಳೂರು**

**ನಾದದಲ್ಲಿ ಲೀನವಾದ ಕಂಚಿನ ಕಂಠ**

**ಉಭಯ ತಿಟ್ಟುಗಳ ಸವ್ಯಸಾಚಿ – ಕಡತೋಕ ಮಂಜುನಾಥ ಭಾಗವತ**



**ಪ್ರೊ.ಎಸ್.ವಿ.ಉದಯ ಕುಮಾರ ಶೆಟ್ಟಿ**

ಧರ್ಮಸ್ಥಳ ಮೇಳವೊಂದರಲ್ಲೇ ಸುಮಾರು ಮೂರುವರೆ ದಶಕ ಸೇವೆ ಸಲ್ಲಿಸಿದ ಯಕ್ಷಗಾನ ಭಾಗವತಿಕೆಯ ಯುಗ ಪ್ರವರ್ತಕ, ಕಂಚಿನ ಕಂಠದ ಭಾಗವತ, ಮರವಂತೆ ದಿ. ನರಸಿಂಹ ದಾಸರ ನಂತರ ಉಭಯ ತಿಟ್ಟುಗಳಲ್ಲಿ ಸುಶ್ರಾಯವಾಗಿ ಹಾಡಬಲ್ಲ, ತನ್ನ ಅದ್ಭುತ ಕಂಠಸಿರಿಯಿಂದ ಕಡತೋಕ ಘರಾಣೆ ಎಂಬ ಹೊಸ ಶೈಲಿಯನ್ನು ಹುಟ್ಟು ಹಾಕಿದ, ಬಡಗು ತೆಂಕುತಿಟ್ಟುಗಳ ಕ್ರಾಂತಿಕಾರಿ ಭಾಗವತ, ಕಡತೋಕ ಮಂಜುನಾಥ ಭಾಗವತರು ಈಗಿಲ್ಲ ಎನ್ನುವುದು ಯಕ್ಷಗಾನಾಭಿಮಾನಿಗಳಿಗೆ ಸಹಿಸಲಾರದ ಸತ್ಯ.

ಯಕ್ಷಗಾನ ಕ್ಷೇತ್ರಕ್ಕೆ ಅತಿರಥ, ಮಹಾರಥ ಕಲಾವಿದರನ್ನು ನೀಡಿದ ಉ.ಕ. ಜಿಲ್ಲೆಯ ಕಡತೋಕದ ಆ ಕಾಲದ ಹಿರಿಯ ಭಾಗವತ ಶಂಭು ಭಾಗವತರ ಮಗನಾಗಿ ಜನಿಸಿದ ಇವರು ಎಳವೆಯಲ್ಲೇ ತಂದೆಯನ್ನು ಕಳೆದುಕೊಂಡು ಅಣ್ಣಂದಿರ ಆಸರೆಯಲ್ಲಿ ಬೆಳೆದವರು.ಭಾಗವತ ವೆಂಕಟರಮಣ ಯಾಜಿ,ಕರ್ಕಿ ಪರಮಯ್ಯ ಹಾಸ್ಯಗಾರ ಕೆರೆಮನೆ ಶಿವರಾಮ ಹೆಗಡೆಯವರ ಶಿಷ್ಯನಾಗಿ, ಬಡಗುತಿಟ್ಟಿನ ರಂಗಜ್ಞಾನ, ತಾಳ ಲಯಾದಿಗಳನ್ನು ಅಭ್ಯಾಸ ಮಾಡಿದ ಇವರು ಬಳಿಕ ಮಾಂಬಾಡಿ ಭಾಗವತರಲ್ಲೂ ಬಲಿಪ ಭಾಗವತರಲ್ಲೂ ತೆಂಕುತಿಟ್ಟಿನ ನಡೆಯನ್ನು ಅಭ್ಯಾಸ ಮಾಡಿದವರು.ಕೆಲ ಕಾಲ ಶಿಕ್ಷಕ ವೃತ್ತಿ ಮಾಡಿದ ಇವರು ಹಿಂದಿ ಜಾಣ ಪರೀಕ್ಷೆಯಲ್ಲಿ ರಾಜ್ಯಕ್ಕೆ ಮೊದಲ ಸ್ಥಾನ ಪಡೆದ ಪ್ರತಿಭಾವಂತರು.

ಸಿದ್ಧಿ, ಪ್ರಸಿದ್ಧಿ, ಜನಪ್ರಿಯತೆ, ಸಾಧನೆ ಎಲ್ಲಾ ನೆಲೆಗಳಲ್ಲೂ ಪರಿಪೂರ್ಣರೆಂದು ಪರಿಗಣಿಸಲ್ಪಡುವ ಇವರು ಯಕ್ಷಗಾನ ರಂಗಭೂಮಿಯ ಅದ್ಭುತ ಪ್ರತಿಭೆ ಎನ್ನುವುದು ನಿರ್ವಿವಾದ.ಕರ್ಕಿ, ಕೆರೆಮನೆ,ಕೊಳಗಿಬೀಸ್,ಮೇಳಗಳಲ್ಲಿ ತಿರುಗಾಟ ಮಾಡಿ ನಂತರ ತೆಂಕಿನ ಕೂಡ್ಲು, ಮೇಳಗಳಿಗೆ ಬಂದು ನಂತರ ನಿರಂತರ ಮೂರುವರೆ ದಶಕ ಧರ್ಮಸ್ಥಳ ಮೇಳದಲ್ಲಿ ಮಹಾ ಮಹಾನ್ ಕಲಾವಿದರನ್ನು ಕುಣಿಸಿದರು. ಆಗ ಡೇರೆ ಮೇಳವಾಗಿದ್ದ ಧರ್ಮಸ್ಥಳ ಮೇಳದಲ್ಲಿ ಪೌರಾಣಿಕ ಪ್ರಸಂಗಗಳಿಗೆ ಹೊಸ ಆಯಾಮ ನೀಡಿ ಕಡತೋಕ ಶೈಲಿಯ ಭಾಗವತಿಕೆಯನ್ನು ಹುಟ್ಟು ಹಾಕಿದರು.ಕುದ್ರೆಕೊಡ್ಲು ರಾಮ ಭಟ್, ಚಿಪ್ಪಾರು, ಕೃಷ್ಣಯ್ಯ ಬಲ್ಲಾಳ್, ಮುಂತಾದವರ ಹಿಮ್ಮೇಳದಲ್ಲಿ,

ಕುರಿಯ ವಿಠಲ ಶಾಸ್ತ್ರಿ ಕುಂಬಳೆ ಸುಂದರ ರಾವ್, ಕೆ.ಗೋವಿಂದ ಭಟ್, ಎಂಪೆಕಟ್ಟೆ ರಾಮಯ್ಯ ರೈ, ಪುತ್ತೂರು ನಾರಾಯಣ ಹೆಗಡೆ,ವಿಟ್ಲ ಶಾಸ್ತ್ರಿಗಳು,ಪಾತಾಳ ವೆಂಕಟರಮಣ ಭಟ್, ನಯನ ಕುಮಾರ ಅಲ್ಲದೆ ಸಮಕಾಲೀನ ಪ್ರಸಿದ್ದರಾದ ಪುತ್ತೂರು ಶ್ರೀಧರ ಭಂಡಾರಿ, ಉಬರಡ್ಕ ಉಮೇಶ ಶೆಟ್ಟಿ,ತಾರಾನಾಥ ಬಲ್ಯಾಯ ಮುಂತಾದ ಮೂರು ತಲೆಮಾರಿನ ಕಲಾವಿದರನ್ನು ರಂಗದಲ್ಲಿ ಕುಣಿಸಿ ಮೇಳಕ್ಕೆ ಕೀರ್ತಿ ತಂದರು.ಆ ಕಾಲದಲ್ಲಿ ತುಂಬಿದ ಡೇರೆಯಲ್ಲಿ ಪ್ರದರ್ಶಿತವಾಗುತಿದ್ದ ಪೌರಾಣಿಕ ನೆಲೆಗಟ್ಟಿನ ಪ್ರಸಂಗಗಳಾದ ಅಮರವಾಹಿನಿ,ಮಹಾಕಲಿ ಮಗಧೇಂದ್ರ ರಂಭಾ ರೂಪ ರೇಖಾ, ಕಾಯಕಲ್ಪ,ಮಹಾರಥಿ ಕರ್ಣ,ಮಹಾಬ್ರಾಹ್ಮಣ,ಚಕ್ರೇಶ್ವರ ಪರೀಕ್ಷಿತ,ಸಹಸ್ರ ಕವಚ ಮೋಕ್ಷ ಮುಂತಾದ ಪ್ರಸಂಗಗಳು ಹೊಸ ಪ್ರೇಕ್ಷಕರನ್ನು ಹುಟ್ಟು ಹಾಕಿದವು.ಅಪೂರ್ವವಾದ ಬಾಯಿತಾಳದಿಂದ ಪ್ರಸಿದ್ದರಾದ ಇವರು ಚಂದ್ರಗಿರಿ ಅಂಬು, ಬಣ್ಣದ ಮಹಾಲಿಂಗ, ಮುಂತಾದವರ ಬಣ್ಣದ  ವೇಷವನ್ನು ರಂಗಕ್ಕೆ ಹೊರಡಿಸುವುದೆ ಒಂದು ವಿಸ್ಮಯ. ತನ್ನ ಸುತ್ತ ಯಕ್ಷಗಾನದ ವಾತಾವರಣ ಸೃಷ್ಟಿಸುವ ಇವರ ಭಾಗವತಿಕೆ ಹಾಸ್ಯರಸಕ್ಕೂ ಹೊಸ ಆಯಾಮ ನೀಡಿದೆ.ತಾಳಮದ್ದಳೆಯಲ್ಲೂ ಅನುಭವಿಸಿ ಹಾಡುವ ಇವರು ಅರ್ಥಧಾರಿಗಳಿಗೂ,ಸಂಘಟಿಕರಿಗೂ ಅಚ್ಚುಮೆಚ್ಚು.



ಕಡತೋಕ ಮಂಜುನಾಥ ಭಾಗವತರು

ನಿರಾತಂಕವಾಗಿ, ನಿರರ್ಗಳವಾಗಿ,ನಿರಾಯಾಸವಾಗಿ ಏರುಶ್ರುತಿಯಲ್ಲಿ ಸ್ಪಷ್ಟ ಉಚ್ಚಾರ,ಖಚಿತವಾದ ಲಯ,ತಾಳಗತಿ,ತಪ್ಪದ ಛಂದಸ್ಸು, ಸಾಹಿತ್ಯ ಪರಿಶುದ್ಧಿ, ರಂಗವಿಧಾನ,ರಾಗಮಾಲಿಕೆ, ಪ್ರಸಂಗಾನುಭವ, ಕಲಾವಿದರನ್ನು ಹದವರಿಯು ಕುಣಿಸುವ ಜಾಣ್ಮೆ, ಸಮ ಹಾಗು ವಿಷಮ ನೆಡೆಯಲ್ಲು ಹಾಡಬಲ್ಲ ಇವರ ಭಾಗವತಿಕೆ ಶೈಲಿ ಸರ್ವಾಂಗ ಸುಂದರ ನಿರ್ದೇಶಕನೊಬ್ಬರಿಗೆ ಬೇಕಾದ ಎಲ್ಲಾ ಅರ್ಹತೆಗಳನ್ನೂ ಹೊಂದಿದೆ.ಉತ್ತರ ಕನ್ನಡದ ರಂಗ ಪರಂಪರೆಯನ್ನು ತೆಂಕುತಿಟ್ಟಿನಲ್ಲಿ ತೋರ್ಪಡಿಸಿದ ಕೀರ್ತಿ ಇವರಿಗಿದೆ.

ಬಡಗಿನ ಭಾಗವತಿಕೆಗೆ ಮದ್ದಳೆಗಾರರಾದ ದುರ್ಗಪ್ಪ ಗುಡಿಗಾರ್, ಪ್ರಭಾಕರ ಭಂಡಾರಿ, ತೆಂಕಿನಲ್ಲಿ ಕುದ್ರೆಕುಡ್ಲು, ನಿಡ್ಲೆ, ಚಿಪ್ಪಾರು ಎಲ್ಲರ ಅಚ್ಚುಮೆಚ್ಚು ಕಡತೋಕರು.ಅಪೂರ್ವವಾದ ಬಾಯಿ ತಾಳ ಹಾಕಿ ಮದ್ದಳೆವಾದನಕ್ಕೆ ಅವಕಾಶ ನೀಡುವ ಏಕಮೇವ ಭಾಗವತರವರು.ತೆಂಕುತಿಟ್ಟಿನ ಪ್ರಸಿದ್ದ ಭಾಗವತರಾದ ಪುತ್ತಿಗೆ ರಘುರಾಮ ಹೊಳ್ಳ, ಸಿರಿಬಾಗಿಲು ರಾಮಕೃಷ್ಣ ಮಯ್ಯರಲ್ಲಿ ಇವರ ಶೈಲಿಯನ್ನು ಗುರುತಿಸಬಹುದಾಗಿದೆ.

ಐದು ದಶಕಗಳ ಕಾಲ ಕಂಠಶಿರಿಯಿಂದ ಯಕ್ಷಗಾನ ಪ್ರಿಯರನ್ನು ರಂಜಿಸಿದ ಕಡತೋಕರು ಪ್ರಸಂಗಕರ್ತರಾಗಿಯೂ ಪ್ರಸಿದ್ದರು ಅವರು ರಚಿಸಿದ ಕವಿರತ್ನ ಕಾಳಿದಾಸ ಪ್ರಸಂಗದ ಪದ್ಯಗಳು ಅಪೂರ್ವವಾದ ಸಾಹಿತ್ಯದಿಂದ ಕೂಡಿದ್ದು ಬಹು ಜನಪ್ರಿಯ ಪ್ರಸಂಗವಾಗಿದೆ. ವಿಕ್ರಮೋರ್ವಶೀಯಂ ಸಹಿತ ಹತ್ತಾರು ಪ್ರಸಂಗಗಳನ್ನು ರಚಿಸಿದವರು. ಹಲವಾರು ಯಕ್ಷಗಾನ ಸಂಬಂಧಿ ಲೇಖನಗಳನ್ನು ಸಹ ಬರೆದವರು. ಪ್ರಯೋಗ ಶೀಲ ರಂಗನಡೆಯಿಂದ ಪಾತ್ರಧಾರಿಗಳ ಅಂತರಂಗ ಅರಿತು ಅಭಿನಯಕ್ಕೆ ಹೆಚ್ಚು ಅವಕಾಶ ನೀಡುವ ಅವರ ಭಾಗವತಿಕೆ ಎಳೆಯರಿಗೆ ಸ್ಫೂರ್ತಿ, ಕಲಾವಿದರಿಗೆ ಅಚ್ಚುಮೆಚ್ಚು, ಭಾಗವತರುಗಳಿಗೆ ಗೌರವ.

ಯಕ್ಷಗಾನ ಕಲೆಗೆ ಪತ್ರಿಕೆಯೊಂದರ ಅಗತ್ಯವಿದೆಯೆಂದು ಬಹು ಬೇಗನೆ ಅರ್ಥೈಸಿಕೊಂಡ ಇವರು ಅರವತ್ತು ವರ್ಷಗಳ ಹಿಂದೆಯೇ ತನ್ನ ಇಪ್ಪತ್ತೆರಡರ ಹರಯದಲ್ಲಿ ಯಕ್ಷಗಾನ ಪತ್ರಿಕೆ ಆರಂಭಿಸಿದ ದೂರದರ್ಶಿತ್ವವುಳ್ಳವರವರು.ಅದೇ ಪತ್ರಿಕೆ ಈಗ ಅವರ ಮಗನಾದ ಗೋಪಾಲಕೃಷ್ಣ ಭಾಗವತರ ಮೂಲಕ ಯಕ್ಷರಂಗ ಎಂಬ ಹೆಸರಿನಲ್ಲಿ ಪ್ರಕಾಶಿತವಾಗುತ್ತಿದೆ.ಯಕ್ಷಗಾನ ಕ್ಷೇತ್ರವು ಸದಾ ನೆನಪಿಸಿಕೊಳ್ಳುವ ಪಾರ್ತಿಸುಬ್ಬನ ಕೃತಿಗಳನ್ನು ಸುಶ್ರಾವ್ಯವಾಗಿ ಹಾಡುವ ಇವರಿಗೆ ಸರಕಾರ ನೀಡುವ ಪಾರ್ತಿಸುಬ್ಬ ಪ್ರಶಸ್ತಿ ಯೋಗ್ಯವಾಗಿಯೇ ಸಂದಿದೆ.ಕರ್ನಾಟಕ ರಾಜ್ಯ ಪ್ರಶಸ್ತಿ ಸಹಿತ ಯಕ್ಷಗಾನದ ಇತರ ಎಲ್ಲಾ ಪ್ರಶಸ್ತಿಗಳು ಅರ್ಜಿ ಇಲ್ಲದೆ ಇವರನ್ನು ಹುಡುಕಿಕೊಂಡು ಬಂದಿದೆ.

ಹದಿನೈದು ವರ್ಷದ ಹಿಂದೆ ಅಪಘಾತದಲ್ಲಿ ಗಾಯಗೊಂಡ ಕಡತೋಕರು ತನ್ನ ಕಂಠಕ್ಕೆ ವಿಶ್ರಾಂತಿ ನೀಡಿ ಮನೆಯಲ್ಲಿಯೇ ಉಳಿದಿದ್ದರು.ಭಾಗವತಿಕೆ ಎಂದರೆ ಹೀಗಿರಬೇಕು ಎಂದು ತೋರಿಸಿದ ಆ ಕಂಚಿನ ಕಂಠ ತುಂಬು ಬಾಳುವೆ ನೆಡೆಸಿ ತನ್ನ ಎಂಬತ್ತೆರಡರ ಹರೆಯದಲ್ಲಿ ಇಹಲೋಕದ ಯಾತ್ರೆ ಮುಗಿಸಿದೆ.ಆ ಸ್ಥಾನಕ್ಕೆ ಪರ್ಯಾಯವಿಲ್ಲವೆನ್ನುವುದೇ ದೌರ್ಭಾಗ್ಯ.

**ಲೇಖಕರು – ಪ್ರೋ.ಎಸ್. ವಿ.ಉದಯ ಕುಮಾರ ಶೆಟ್ಟಿ ಮಣಿಪಾಲ, ಪ್ರಾಧ್ಯಾಪಕರು, ಎಂ.ಐ.ಟಿ.ಮಣಿಪಾಲ**

## ಧೀರಕಲೆಯೊಳಗೆ ಕೀರವಾಣಿಯರು – 04



**ಸಾಯಿಸುಮಾ ಎಂ. ನಾವಡ,**

### ಶ್ರೀಮತಿ ಮೂಕಾಂಬಿಕಾ ವಾರಂಬಳ್ಳಿ – ಎಪ್ಪತ್ತರ ದಶಕದಲ್ಲಿ ಗೆಜ್ಜೆ ಕಟ್ಟಿ ಹೆಜ್ಜೆ ಹಾಕಿದ ದಿಟ್ಟ ಕಲಾವಿದೆ

ಎಳವೆಯಲ್ಲೇ ಕಲಾಸಕ್ತಿಯನ್ನು ಹೊಂದಿದ್ದ ಹೆಣ್ಣೋರ್ವಳು ಸಾಮಾಜಿಕ ಕಟ್ಟುಪಾಡುಗಳಿಂದ ಕಲಾಪ್ರಪಂಚದಲ್ಲಿ ತೆರೆದುಕೊಳ್ಳುವುದಕ್ಕೆ ಅವಕಾಶ ವಂಚಿತೆಯಾಗಿದ್ದು, ವಿವಾಹಾನಂತರ ಬಾಲ್ಯದಿಂದಲೂ ಸೆಳೆತವನ್ನು ಹೊಂದಿದ್ದ ಯಕ್ಷಗಾನದಲ್ಲಿ ಕಲಾವಿದೆಯಾಗಿ ಗುರುತಿಸಿಕೊಂಡದ್ದು ಇಂದಿನ ಅನೇಕರಿಗೆ ಪ್ರೇರಕ ಸಂಗತಿಯೆಂದರೆ ತಪ್ಪಲ್ಲ. ಆಕೆ ಅನೇಕರನ್ನು ಯಕ್ಷಗಾನದಲ್ಲಿ ತೊಡಗಿಸಿಕೊಳ್ಳುವಂತೆ  ಮಾಡುತ್ತಿರುವುದು, ತನ್ನ ನಿವೃತ್ತ ಜೀವನದಲ್ಲೂ ಈ ದಿಶೆಯಲ್ಲಿ ಪ್ರಯತ್ನಿಸುತ್ತಿರುವುದು ಸಂತಸದ ವಿಚಾರವಲ್ಲದೇ ಮತ್ತೇನಲ್ಲ.

ಪ್ರಸಿದ್ಧ ಮಾರ್ವಿ ಮನೆತನದ ಶ್ರೀಮತಿ ಮೂಕಾಂಬಿಕಾ ವಾರಂಬಳ್ಳಿ, ದಶಾವತಾರಿ ಮಾರ್ವಿ ರಾಮಕೃಷ್ಣ ಹೆಬ್ಬಾರರ ಮೊಮ್ಮಗಳು, ಯಜ್ಞನಾರಾಯಣ ಹೆಬ್ಬಾರ್ ಹಾಗೂ ಕಾವೇರಮ್ಮ ದಂಪತಿಗಳ ಮಗಳು. ತನ್ನೂರಿನ ಸುತ್ತಮುತ್ತ ನಡೆಯುತ್ತಿದ್ದ ಯಕ್ಷಗಾನ ಬಯಲಾಟಗಳನ್ನು ಬೆರಗುಗಣ್ಣುಗಳಿಂದ ನೋಡುತ್ತಿದ್ದಾಕೆ ತಾನೂ ವೇಷವಾಗಿ ಕುಣಿಯುವ ಬಯಕೆಯನ್ನು ಅಂದಿನಿಂದಲೇ ಮನದಲ್ಲಿ ಇರಿಸಿಕೊಂಡವರು. ಅದೇ ಯಕ್ಷಗಾನದ ಹೆಜ್ಜೆಗಳನ್ನು ತನ್ನಷ್ಟಕ್ಕೇ ಹಾಕುವುದಕ್ಕೆ ಹೊರಟರೆ 'ಗಂಡ್ ಬೀರಿ ಕುಣಿತ್ತ್ ಕಾಣ್' ಎಂಬ ಮನೆಯವರ ಗದರಿಕೆಗೆ ಒಳಗಾಗುತ್ತಿದ್ದರು ಬಿಟ್ಟರೆ ಮತ್ತೇನನ್ನೂ ಮಾಡುವುದಕ್ಕೆ ಆಗ ಸಾಧ್ಯವಾಗುತ್ತಿರಲಿಲ್ಲ. ತನ್ನ ವಿದ್ಯಾಭ್ಯಾಸವನ್ನು ಮುಗಿಸಿ, ಸಿಂಡಿಕೇಟ್ ಬ್ಯಾಂಕ್ ಉದ್ಯೋಗಿಯಾದ ಬಳಿಕ ವೃತ್ತಿಯಲ್ಲಿ ಅಧ್ಯಾಪಕರಾಗಿದ್ದ ಶ್ರೀ ಬಿ. ಗೋವಿಂದರಾಜ ವಾರಂಬಳ್ಳಿಯವರನ್ನು ಕೈಹಿಡಿಯುತ್ತಾರೆ. ಮದುವೆಯಾದ ಬಳಿಕ ಇವರ ಕನಸುಗಳೆಲ್ಲವೂ ಕೈಗೂಡುವ ಕಾಲ ಬಂತೆಂದರೆ ಹೆಚ್ಚಲ್ಲ.  1976 ರಲ್ಲಿ ಬ್ಯಾಂಕಿನ 'ರಿಕ್ರಿಯೇಶನ್ ಕ್ಲಬ್ ಡೇ' ಎಂಬ ಕಾರ್ಯಕ್ರಮದಲ್ಲಿ ಹೆಣ್ಣುಮಕ್ಕಳು ಯಕ್ಷಗಾನ ಮಾಡಬೇಕೆಂಬ ನಿರ್ಧಾರವಾದಾಗ ಮೂಕಾಂಬಿಕಾ ವಾರಂಬಳ್ಳಿಯವರ ಕನಸುಗಳಿಗೆ ರೆಕ್ಕೆ–ಪುಕ್ಕ ಬಂದಿತು.  ಅದೇ ಬ್ಯಾಂಕಿನಲ್ಲಿ ಉದ್ಯೋಗಿಯಾಗಿದ್ದವರು ಹವ್ಯಾಸಿ ಕಲಾವಿದರಾದ ಶ್ರೀಧರ ಐತಾಳರು. ಅವರ ನಿರ್ದೇಶನವೂ ಮಹಿಳಾ ಪಾತ್ರಧಾರಿಗಳಿಗೆ ಸಿಕ್ಕಿತು. ತನ್ನ ಪತಿಯವರ ಅಪ್ಪಣೆಯ ಜೊತೆಗೆ, ಯಕ್ಷಗಾನ ಕಲೆಯಲ್ಲಿ ತೊಡಗಿಸಿಕೊಳ್ಳುವುದಕ್ಕೆ ಪ್ರೋತ್ಸಾಹವೂ ಸಿಕ್ಕಿದಾಗ ವಾರಂಬಳ್ಳಿಯವರು ಯಕ್ಷರಂಗದಲ್ಲಿ ಮುಂದುವರಿಯುವ ಕನಸು ಕಟ್ಟಿಕೊಂಡರು. ಅಲ್ಲಿ ನಡೆದದ್ದು ತೆಂಕುತಿಟ್ಟು ಪ್ರದರ್ಶನ. 'ಬಭ್ರುವಾಹನ ಕಾಳಗ'. ಅದರ ಕೃಷ್ಣನಾಗಿ ವಾರಂಬಳ್ಳಯವರ ರಂಗಪ್ರವೇಶ. ಹೀಗೆ ತೆಂಕುತಿಟ್ಟಿನ ಮೂರು ಪ್ರದರ್ಶನಗಳು. ಮುಂದೆ ಬಡಗುತಿಟ್ಟಿನಲ್ಲಿ ಮುಂದುವರಿಯುವ ಹಂಬಲ, ಎದುರು ಸಿಕ್ಕ ಅನೇಕ ಸವಾಲುಗಳು ಎಲ್ಲವನ್ನೂ ಎದುರಿಸುತ್ತಾ ಸಮರ್ಥ ಗುರುಗಳೊಬ್ಬರನ್ನು ಪಡೆಯುವಲ್ಲಿ ಸಫಲರಾದರು. ಆಗ ಗುರುಗಳಾಗಿ ಸಿಕ್ಕವರೇ ಮದ್ದಳೆ ಮಾಂತ್ರಿಕ ಶ್ರೀ ಹಿರಿಯಡಕ ಗೋಪಾಲರಾಯರು.

ಅವರು ಬ್ಯಾಂಕಿಗೆ ಯಕ್ಷಗಾನವನ್ನು ಕಲಿಸುವುದಕ್ಕಾರಂಭಿಸಿದರು. ಇವರ ಕೂಟಕ್ಕೆ 'ಸಿಂಡಿಕೇಟ್ ಬ್ಯಾಂಕ್ ರಿಕ್ರಿಯೇಶನ್ ಕ್ಲಬ್ ದಶಾವತಾರಿ ಮೇಳ' ಎಂದು ಹೆಸರಿಟ್ಟರು. ಪ್ರಪ್ರಥಮ ಬಾರಿಗೆ ಮಹಿಳಾ ತಂಡವೊಂದು ಸಮರ್ಥವಾಗಿ ಯಕ್ಷಗಾನ ಪ್ರದರ್ಶನವನ್ನು ನೀಡಿದ ಹೆಗ್ಗಳಿಕೆ ಈ ತಂಡದ್ದು. ಆ ಬಳಿಕ ಮಹಿಳಾ ಯಕ್ಷಗಾನಕ್ಕೆ ಒಂದು ಹೊಸ ಆಯಾಮ ಸಿಕ್ಕಿತು. ಶಾಲೆಗಳಲ್ಲಿ ಮುಂತಾದ ಕಡೆಗಳಲ್ಲಿ ಮಹಿಳಾ ಯಕ್ಷಗಾನ ಆರಂಭವಾಯಿತು. ಸಿಂಡಿಕೇಟ್ ಬ್ಯಾಂಕ್ ತಂಡದ ಮೊದಲ ಬಡಗುತಿಟ್ಟಿನ ಪ್ರದರ್ಶನ



ಮೂಕಾಂಬಿಕಾ ವಾರಂಬಳ್ಳಿ

'ತಾಮ್ರಧ್ವಜ ಕಾಳಗ' ಮೂಕಾಂಬಿಕಾ ಬಾರಂಬಳ್ಳಿಯರು ತಾಮ್ರಧ್ವಜನಾಗಿ ಕಾಣಿಸಿಕೊಂಡು ಜನಮನ ಸೂರೆಗೊಂಡರು. ಆ ಬಳಿಕ ಹಿಂದಿರುಗಿ ನೋಡಲೇ ಇಲ್ಲ. ಹೀಗೆ ಎಪ್ಪತ್ತರ ದಶಕದಲ್ಲಿ ಮಹಿಳಾ ಯಕ್ಷಗಾನಕ್ಕೊಂದು ಮುನ್ನುಡಿ ಬರೆದದ್ದೇ ಇವರ ವಿಶೇಷತೆ. ಸುಮಾರು ಹದಿನೈದು ಪ್ರಸಂಗಗಳನ್ನು ನೂರೈವತ್ತಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿ, ಅದರಲ್ಲಿ ಮುಖ್ಯ ಪಾತ್ರಧಾರಿಯಾಗಿ ಮಿಂಚಿದವರು ವಾರಂಬಳ್ಳಿಯವರು.

ಹಿಂದೆ ಯಕ್ಷಗಾನ ಹೆಮ್ಮಕ್ಕಳಿಗೇಕೆ? ಎಂದವರೆಲ್ಲವರೂ ಮೂಗಿನ ಮೇಲೆ ಬೆರಳಿಡುವಂತೆ ಮಾಡಿದರು ವಾರಂಬಳ್ಳಿಯವರು. ಮನೆಯವರ ಪ್ರೋತ್ಸಾಹ ಇವರ ಉತ್ಸಾಹವನ್ನು ಹೆಚ್ಚಿಸಿತು. ಕರ್ಣ, ಸುಧನ್ವ, ತಾಮ್ರಧ್ವಜ, ಭೀಷ್ಮ, ಕೃಷ್ಣ, ಅರ್ಜುನ, ದೇವವ್ರತ ಮುಂತಾದ ಪ್ರಮುಖ ಪಾತ್ರಗಳನ್ನು ನಿರ್ವಹಿಸಿ ಸೈ ಎನಿಸಿಕೊಂಡರು. ಸುಧನ್ವನ ಪಾತ್ರವನ್ನು 35 ಬಾರಿ ನಿರ್ವಹಿಸಿ ಜನಮೆಚ್ಚುಗೆ ಪಡೆದರು. ಆ ಪಾತ್ರಕ್ಕೆ ಅನೇಕ ಕಡೆಗಳಲ್ಲಿ ಸನ್ಮಾನವನ್ನೂ ಪಡೆದುಕೊಂಡವರಿವರು. ನೋಟಿನ ಮಾಲೆಯನ್ನು ಹಾಕಿಸಿಕೊಂಡವರು. ಇವರ ಪಾತ್ರಗಳನ್ನು ಕಂಡು ಹಾರಾಡಿ ಕುಷ್ಠ ಗಾಣಿಗರನ್ನು, ಕೆರೆಮನೆ ಮಹಾಬಲ ಹೆಗಡೆಯವರ ಪಾತ್ರ ನೋಡಿದಂತಾಯಿತು ಎಂದು ಅನೇಕರು ಕೊಂಡಾಡಿದರು. ಇವರ ಸುಧನ್ವ, ಕರ್ಣ, ಹನೂಮಂತ, ಭೀಷ್ಮ ಪಾತ್ರಗಳನ್ನು ನೋಡುವುದಕ್ಕೆ ಅಭಿಮಾನಿಗಳು ಬರುತ್ತಿದ್ದರು.




ಮೂಕಾಂಬಿಕಾ ವಾರಂಬಳ್ಳಿ

ನಾಟ್ಯಾಭಿನಯ, ಭಾವಾಭಿವ್ಯಕ್ತಿ, ಅರ್ಥಗಾರಿಕೆ ಹೀಗೆ ಸಮರ್ಥವಾಗಿ ಪಾತ್ರವನ್ನು ನಿರ್ವಹಿಸಿ ಪುರುಷ ಕಲಾವಿದರಂತೆ ಸಮರ್ಥವಾಗಿ ನ್ಯಾಯ ಒದಗಿಸಿದವರು ಎಂಬ ನೆಗಳ್ತೆಯನ್ನು ಪಡೆದವರು ಶ್ರೀಮತಿ ಮೂಕಾಂಬಿಕಾ ವಾರಂಬಳ್ಳಿಯವರು. ಕರ್ಣನ ಪಾತ್ರಧಾರಿಯಾಗಿ ಒಂಬತ್ತು ಅಟ್ಟೆಗಳಿಂದ ಕಟ್ಟಿದ ಮುಂಡಾಸನ್ನು ಹೊತ್ತು ಸಮರ್ಥವಾಗಿ ಕರ್ಣನ ಪಾತ್ರಕ್ಕೆ ನ್ಯಾಯ ಒದಗಿಸಿದವರು. ಇವರ ಸುಧನ್ವ ಪಾತ್ರದ ಪ್ರಸಿದ್ಧಿಯಿಂದಾಗಿ ಇವರನ್ನು 'ಸಿಂಡಿಕೇಟ್ ಸುಧನ್ವ' ಅಂತಲೇ ಕರೆಯುತ್ತಿದ್ದರು. ಶ್ರೀಯುತ ಚಿಟ್ಟಾಣಿ ರಾಮಚಂದ್ರ ಹೆಗಡೆಯವರೇ ಇವರ ಸುಧನ್ವನನ್ನು ನೋಡಿ ಮನತುಂಬಿ ಹರಸಿದ್ದರಂತೆ. ಇವರ ತಂಡದ 'ಭಕ್ತಸುಧನ್ವ' ದೂರದರ್ಶನ ಚಂದನದಲ್ಲೂ ಪ್ರಸಾರಗೊಂಡಿದೆ. ಇವರ ತಂಡ ಕರ್ನಾಟಕದಲ್ಲಿ ಮಾತ್ರವಲ್ಲದೇ ಗೋವಾ, ಆಂಧ್ರಪ್ರದೇಶ, ಕೇರಳ ಮುಂತಾದ ಕಡೆಗಳಲ್ಲೂ ಪ್ರದರ್ಶನಗಳನ್ನು ಕೊಟ್ಟಿದೆ. ಶ್ರೀಮತಿ ಮೂಕಾಂಬಿಕಾ ವಾರಂಬಳ್ಳಿಯವರು ವೇಷಧಾರಿ ಮಾತ್ರವಲ್ಲ. ಭಾಗವತಿಕೆಯನ್ನೂ ನೀಲಾವರ ಲಕ್ಷ್ಮೀನಾರಾಯಣಯ್ಯನವರಿಂದ ಅಭ್ಯಸಿಸಿದವರು. ತಾಳಮದ್ದಳೆಗಳಲ್ಲಿ ಅರ್ಥಧಾರಿಗಳಾಗಿ ಕಾಣಿಸಿಕೊಂಡವರು. ಯಕ್ಷಗಾನದ ಸಮರ್ಥ ಸಂಪನ್ಮೂಲ ವ್ಯಕ್ತಿಯಾಗಿಯೂ ಕಾಣಿಸಿಕೊಂಡವರು. ಯಕ್ಷಗಾನ ಮಾತ್ರವಲ್ಲದೇ ಇತರ ಕಲೆಗಳಲ್ಲಿಯೂ ಆಸಕ್ತರು. ಕತೆ, ಕವನಗಳನ್ನು ಬರೆಯುವ ಹವ್ಯಾಸ ಹೊಂದಿದವರು. 2012 ರಲ್ಲಿ ತನ್ನ ಪತಿಯವರ ಅಪೇಕ್ಷೆಯಂತೆ ತಾನು, ತನ್ನ ಮಗಳು ಸಹನಾ ಹಾಗೂ ಮೊಮ್ಮಕ್ಕಳ ಜೊತೆಗೆ 'ಭೀಷ್ಮೋತ್ಪತ್ತಿ' ಯಕ್ಷಗಾನ ಪ್ರದರ್ಶನವನ್ನು ಮೂರು ತಲೆಮಾರಿನ ವಿಶೇಷತೆಯೊಂದಿಗೆ ನೀಡಿರುತ್ತಾರೆ. ಇವರ ಕಲಾಸೇವೆಯನ್ನು ಗುರುತಿಸಿ, 2004 ರಲ್ಲಿ 'ಯಕ್ಷಪ್ರಮೀಳಾ ಪ್ರಶಸ್ತಿ, 2012 ರಲ್ಲಿ 'ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಇವರನ್ನು ಅರಸಿ ಬಂದಿವೆ. ಇಂದಿಗೂ ಎರಡು ಶಾಲೆಗಳಲ್ಲಿ ಮಕ್ಕಳಿಗೆ ಯಕ್ಷಗಾನ ತರಬೇತಿಯನ್ನು ನೀಡುತ್ತಿದ್ದಾರೆ. ಇವರು ತಮ್ಮ ಮಕ್ಕಳಿಗೆ ಯಕ್ಷಗಾನವನ್ನು ದಾಟಿಸಿದ್ದಲ್ಲದೇ, ಅನೇಕ ಆಸಕ್ತರಿಗೂ ಯಕ್ಷಗಾನವನ್ನು ಧಾರೆಯೆರೆದವರು. ಇವರ ಜೀವನವನ್ನು ಕಲಾಮಾತೆ ಇನ್ನಷ್ಟು ಬೆಳಗಿಸಲಿ ಎಂದು ಆಶಿಸೋಣ.

**ಲೇಖಕರು –ಸಾಯಿಸುಮಾ ಎಂ. ನಾವಡ, ಕಾರಿಂಜ**

## ಯಕ್ಷ ನೋಟ – ಕಾಡುವ ಸನ್ನಿವೇಶ



ನರಾಡಿ ಭೋಜರಾಜ ಶೆಟ್ಟಿ

**ಕಲಾವಿದರು – ನರಾಡಿ ಭೋಜರಾಜ ಶೆಟ್ಟಿ**

**ಸೇವೆ ಸಲ್ಲಿಸುತ್ತಿರುವ ಮೇಳ** – ಮಂದಾರ್ತಿ ಒಂದನೆಯ ಮೇಳ

**ಯಕ್ಷಪಯಣ ಆರಂಭಿಸಿದ ಮೇಳ** – ಕೋಟ ಅಮೃತೇಶ್ವರಿ ಮೇಳ (ಇ–1972–72)

**ಯಕ್ಷಗುರುಗಳು** – ದಿ. ಮಂಜುನಾಯ್ಕ ಶಿರಿಯಾರ, ಕೋಟ ವೈಕುಂಠ ನಾಯಕ್

**ಒಡನಾಟ** – ನಾರ್ಣಪ್ಪ ಉಪ್ಪೂರ, ಕಾಳಿಂಗ ನಾವಡ, ಶಿರಿಯಾರ ಮಂಜು ನಾಯಕ್, ಕೆರೆಮನೆ ಮಹಾಬಲ ಹೆಗಡೆ, ಚಿಟ್ಟಾಣಿ ರಾವ

**ಯಕ್ಷಾನುಭ** – 51 ವರ್ಷ

**ಪ್ರಧಾನ ಪಾತ್ರಗಳು** – ಬಬ್ರುವಾಹನ ಅಭಿಮನ್ಯು, ಅರ್ಜುನ, ಸುಧನ್ವ, ಭೀಷ್ಮ, ವಾಲಿ, ಮಾರ್ತಾಂಡ ತೇಜ, ಋತುಪರ್ಣ

ಪ್ರಸ್ತುತ ಮಂದಾರ್ತಿ ಒಂದನೆ ಮೇಳದಲ್ಲಿ ಪ್ರದಾನ ವೇಷಧಾರಿಯಾಗಿ ಸೇವೆ ಸಲ್ಲಿಸುತ್ತಿರವ ನರಾಡಿ ಭೋಜರಾಜ ಶೆಟ್ಟಿಯವರು ಯಕ್ಷಗಾನದ ಇಂದಿನ ಸ್ಥಿತಿಗತಿಗಳ ಬಗ್ಗೆ ತಮ್ಮ ಅನುಭವಗಳನ್ನು ನಾದನೂಪುರ ಪತ್ರಿಕೆಯೊಂದಿಗೆ ಹಂಚಿಕೊಂಡಿದ್ದಾರೆ. ಪ್ರಾರಂಭದಲ್ಲಿ ಅಮೃತೇಶ್ವರೀ ಮೇಳದಲ್ಲಿ ಯಕ್ಷ ಜೀವನ ಆರಂಭಿಸಿದ ನರಾಡಿ ಭೋಜರಾಜ ಶೆಟ್ಟಿಯವರು ಅದಕ್ಕೂ ಮೊದಲು ಹೂವಿನ ಕೋಲು ತಿರುಗಾಟ ನಡೆಸಿದವರು, ನಂತರ ಅದು ಅವರನ್ನು ಯಕ್ಷಗಾನದತ್ತ ಸೆಳೆಯಿತು. ಯಕ್ಷಗಾನ ಕಲೆ ಮತ್ತು ಕಲಾವಿದರ ಬಗೆಗಿನ ಅವರ ನೋಟ ಹೀಗಿದೆ.

**ಯಕ್ಷಗಾನದ ಸ್ಥಿತಿಗತಿ** – ಯಕ್ಷಗಾನದ ಈಗಿನ ಸ್ಥಿತಿಗತಿಯಲ್ಲಿ ಬದಲಾವಣೆ ಆಗಿದೆ. ಬದಲಾವಣೆಯಲ್ಲಿ ಒಳ್ಳೆಯದನ್ನು ನಾನು ಸ್ವೀಕರಿಸ್ತೇನೆ, ರಂಗದಲ್ಲಿ ವಿಕಾರತೆ, ಅಸಂಬದ್ಧ, ಪ್ರಬುದ್ಧತೆ ಇಲ್ಲದ ಭಾಷೆಗಳನ್ನು ನಾನು ಒಪ್ಪುವುದಿಲ್ಲ. ಆಕ್ಷೇಪಿಸಲೂ ಹೋಗುವುದಿಲ್ಲ. ಆದರೆ ಅಂಥಹ ಬದಲಾವಣೆಗಳನ್ನು ಸಹಿಸಲಾಗುವುದಿಲ್ಲ. ಪೌರಾಣಿಕ ಪ್ರಸಂಗ ಆಡುವಾಗ, ಸೂರ್ಯವಂಶ, ಚಂದ್ರ ವಂಶ, ಭಾಗವತದ ಪ್ರಸಂಗಗಳನ್ನು ಆಡುವಾಗ ಅಥವಾ ಇಂದ್ರಾದಿ ದೇವತೆಗಳು, ದೈತ್ಯರಾದ ರಾವಣ ಇಂಥಹ ಘನ ಪಾತ್ರಗಳ ನಿರ್ವಹಣೆಯಲ್ಲಿ ಅಸಂಬದ್ಧ ಅಶ್ಲೀಲಗಳು ಅಪಸವ್ಯ ಬರಬಾರದೆಂಬ ಅನಿಸಿಕೆ ನನ್ನದು, ತೆಂಕು ತಿಟ್ಟಿನ ತಾಳಮದ್ದಳೆಯಲ್ಲಿ ಹಾಸ್ಯಾಸ್ಪದವಾಗಿ ವೈಚಾರಿಕತೆ ಐತಿಹಾಸಿಕ ರಂಜನೆ

ನಡೆಯುತ್ತದೆ. ಆದರೆ ರಂಗಸ್ಥಳದಲ್ಲಿ ತಾಳಮದ್ದಳೆಯಲ್ಲಿ ಹೇಳಿದ ಅರ್ಥವನ್ನು ಹೇಳಿದ್ರೆ ವಿಪರ್ಯಾಸವಾಗುತ್ತದೆ. ನಾಲ್ಕು ಕಂಬದ ಒಳಗಿನ ರಂಗ ಮಂಟಪಕ್ಕೂ ತಾಳಮದ್ದಳೆಯ ವೇದಿಕೆಗೂ ವ್ಯತ್ಯಾಸ ಇದೆ. ಜನರನ್ನು ರಂಜಿಸುವುದೇ ಬೇರೆ ರಂಗಸ್ಥಳದ ವೇದಿಕೆಯೇ ಬೇರೆ.

**ಬದಲಾದ ಹಿಮ್ಮೇಳ –** ಇನ್ನು ಭಾಗವತರು ಹಾಡುವ ಪದ್ಯಗಳೂ ಅತಿರೇಕ ಮಟ್ಟಕ್ಕೆ ಹೋಗಿವೆ. ಸ್ಥರ, ಸ್ಥಾಯಿ ಒಂದೊಂದು ಚರಣಗಳು ಇಂತಿಷ್ಟೇ ಹಾಡಬೇಕು ಎಂದಿದೆ. ಕಲಾವಿದನ ಅಭಿನಯ ಎದುರು ಕಲಾವಿದನಿಗೆ ಬದ್ಧತೆಯಿಂದಿರಬೇಕು. ಆದರೆ ಈಗ ಹಾಗಲ್ಲ, ಪದ್ಯಗಳನ್ನು 19 ಬಾರಿ ಹೇಳ್ತಾರೆ. ಒಬ್ಬನೇ ಕಲಾವಿದ ಸುಧೀರ್ಘವಾಗಿ ಅಭಿನಯಿಸಿದಾಗ ಎದುರು ವೇಷಧಾರಿ ನರ್ವಸ್ ಆಗಿ ಬಿಡುತ್ತಾನೆ. ಉದಾಹರಣೆಗೆ ಸೃಷ್ಟಿಗರ್ಜುನ ಎಂದ ಪದ, ಇದರಲ್ಲಿ ಇಷ್ಟೇ ಹಾಡಿದರೆ ಒಳ್ಳೆಯದು ಎಂಬ ಇತಿ ಮಿತಿ ಎಂದಿದೆ. ಕಲಾವಿದನೊಬ್ಬ ಸೃಷ್ಟಿಗರ್ಜುನ ಎಂಬಲ್ಲಿಂದ ಹತ್ತಾರು ಅಭಿನಯಗಳನ್ನು ಮಾಡಲು ತೊಡಗುತ್ತಾರೆ. ಅದು ಸುದೀರ್ಘವಾದಾಗ ಅರ್ಜುನ ಪಾತ್ರ ಹೇಗೆ ಸ್ಪಂದಿಸಬೇಕು ಗೊತ್ತಾಗದೆ ಮೌನವಾಗಿ ನಿಂತಿರಬೇಕಾದ ಸಂದರ್ಭ ಎದುರುಗಾಗ್ತದೆ. ಇದು ಹೀಗಾಗಬಾರದು



ಕಲಾವಿದರು – ನರಾಡಿ ಭೋಜರಾಜ ಶೆಟ್ಟಿ

**ವಿಶೇಷ ಆಕರ್ಷಣೆಗಳು –** ಹೊಸ ಪ್ರಸಂಗಗಳು ಬಂದಾಗ ಕೆಲವೊಮ್ಮೆ ಒಳ್ಳೊಳ್ಳೆ ವಿಚಾರಗಳು ಬಂದಿವೆ. ಕೆಲವುದರಲ್ಲಿ ವಿಕಾರತೆಗಳೆಲ್ಲ ಇದ್ದಿಲ್ಲ. ಬರುಬರುತ್ತಾ ಮೇಳದ ಕಲೆಕ್ಷನ್ ಗಾಗಿ ಕೆಲವೊಂದು ವಿಶೇಷತೆ, ದೃಶ್ಯ, ಲೈಟಿಂಗ್, ಪದ್ಯದ ವಿಚಾರದಲ್ಲಿ, ಕುಣಿಸುವುದರಲ್ಲಿ, ದ್ವಂದ್ವ ಹಿಮ್ಮೇಳ, ಎರಡು ವೇಷವನ್ನು ಗಂಟೆಗಟ್ಟಳೆ ಕುಣಿಸುವುದಕ್ಕೆ ಶುರು ಮಾಡಿದರು. ಇವುಗಳು ಕೆಲವು ಕಡೆ ರಂಜನೆ ನೀಡಿದೆ. ರವೀಂದ್ರ ಕಲಾಕ್ಷೇತ್ರದಲ್ಲಿ ಇಂತಹಾ ಆಕರ್ಷಣೆಗಳಿಗೆ ಶಿಳ್ಳೆ ಚಪ್ಪಾಳೆಗಳು ಬೀಳುತ್ತಿದ್ದವು. ಆದರೆ ಇಂತಹ ಅನಗತ್ಯ ಆಕರ್ಷಣೆಗಳೇ ಮಿತಿ ಮಿರಿ ಪಾತ್ರ ನಿರ್ವಹಿಸುವುದನ್ನು ಹಾಗೂ ಪಾತ್ರದ ಬಲಿಷ್ಠತೆ ಮರೆತು ಚಪ್ಪಾಳೆಗಾಗಿ ಹಾಡು ಕುಣಿತ ಹೆಚ್ಚು ಮಾಡಲು ಪ್ರಾರಂಭಿಸಿದರು. ಕೆಲವು ಕಲಾವಿದರು ನೃತ್ಯದಲ್ಲಿ ಹೆಚ್ಚುಗಾರಿಕೆ ಪಡೆದವರು, ಕಣ್ಣಿಮನೆ ಗಣಪತಿ ಭಟ್, ತೀರ್ಥಹಳ್ಳಿ ಗೋಪಾಲ್ ಆಚಾರ್, ಇವರ ಕುಣಿತದಲ್ಲಿ ಚೆಂದ ಇತ್ತು. ಆದರೆ ಅದನ್ನು ಇನ್ನೊಬ್ಬರು ಅನುಕರಣೆ ಮಾಡಿದಾಗ ವಿಕಾರ ಆಗುತ್ತದೆ. ನಾವುಡರ ಪದ್ಯಕ್ಕೆ ಇತಿಮಿತಿಗಳಿದ್ದವು. ಲೆಕ್ಕಾಚಾರ ಇತ್ತು ನಂತರದ ಕೆಲವು ಭಾಗವತರು ಅದನ್ನು ಅನುಕರಣೆ ಮಾಡಲು ತೊಡಗಿದಾಗ ಅದು ಚೆಂದಕ್ಕಿಂತ ವಿಕಾರಗಳು ಉಂಟಾಯಿತು ಎಂಬ ಭಾವನೆ. ಈಗ ಇಂತಹಾ ಸೂಕ್ಷ್ಮಗಳನ್ನು ವಿಚಾರ ಮಾಡಬಲ್ಲ ವಿಮರ್ಶಕರು ಕಡಿಮೆ ಆಗಿದ್ದಾರೆ. 80 ಶೇ. ಜನರು ವಿಕಾರವೇ ಯಕ್ಷಗಾನ ಅಂತ ತಿಳ್ಕೊಂಡಿದ್ದಾರೆ.

**ದ್ವಂದ ಹಿಮ್ಮೇಳ –** ದ್ವಂದ ಹಿಮ್ಮೇಳ ಆಗಿನ ಕಾಲದಲ್ಲೇ ಅಂದರೆ 1975–76 ರಲ್ಲೇ ಇತ್ತು. ಆಗ ಹೇಗಿತ್ತೆಂದರೆ ಕಡತೋಕ ಭಾಗವತರು, ನಾರಣಪ್ಪ ಉಪ್ಪೂರರು, ಕಾಳಿಂಗ ನಾವುಡರು, ಒಂದೊಂದು ಪದ್ಯವನ್ನು ಒಬ್ಬೊಬ್ಬರೇ ಮುಗಿಸುತ್ತಿದ್ದರು. ಪದ್ಯಗಳು ಹಾಡಿ ಮುಗಿದ ಕೊನೆಯ ಹಂತದಲ್ಲಿ ಚಪ್ಪಾಳೆ ಬೀಳ್ತಾ ಇತ್ತು. ಒಬ್ಬ ಭಾಗವತರು ಹೇಳಿದ ಪದ್ಯವನ್ನು ಇನ್ನೊಬ್ಬರು ಹೇಳುತ್ತಿರಲಿಲ್ಲ. ಈಗ ಏನಾಗಿದೆ ಎಂದರೆ ನಮ್ಮ ಮಂದಾರ್ತಿ ಮೇಳದಲ್ಲೇ ಐದು ಮೇಳಗಳಿವೆ ಒಂದೇ ಪದ್ಯವನ್ನು 5 ಜನ ಹಾಡ್ತಾರೆ. ಒಂದು ಪದ್ಯವನ್ನು ಒಬ್ಬ ಹೇಳಿದ ನಂತರ ಮುಂದಿನ ಪದ್ಯವನ್ನು ಮತ್ತೊಬ್ಬ ಹೇಳ್ಬೇಕು ಮೂರನೆಯವ ಮತ್ತೊಂದು, ನಾಲ್ಕನೆಯವ, ಐದನೆಯವ ಬೇರೆ ಬೇರೆ ಪದ್ಯ ಹಾಡಿದರೆ ಚೆಂದ ಆಗ್ತಿತ್ತು. ಆದರೆ ಅವನಿಗಿಂತ ನಾನು ಚೆಂದ ಹೇಳ್ತೇನೆ ಅಂತ ಭಾಗವತರು ಪೈಪೋಟಿಗೆ ಹೇಳ್ತಾ ಹೋಗ್ತಾರೆ. ಇದರಿಂದ ಕಥೆಯ ಸ್ವಾರಸ್ಯ ಹಾಳಾಗ್ತದೆ. ಪಾತ್ರಧಾರಿಗೂ ಕಷ್ಟ ಆಗ್ತದೆ. ಭಾವಪೂರ್ಣವಾಗಿ ಪಾತ್ರ, ಸನ್ನಿವೇಶ ನಿರ್ವಹಣೆ ಮಾಡಲು ಕಷ್ಟ ಆಗ್ತದೆ. ನೋಡುವವರಿಗೆ ಅರ್ಧ ಗಂಟೆಯ ಪ್ರದರ್ಶನ ಆಶ್ಚರ್ಯವಾಗಿ ಕಾಣಬಹುದು, ಆದರೆ ಯಕ್ಷಗಾನವಾಗಿ ರುಚಿಸುವುದಿಲ್ಲ. ಈಗಿನ ಕಲಾವಿದರಲ್ಲಿ ಕಲಿಯುವ ಆಸಕ್ತಿ ಕಡಿಮೆ ಇದೆ. ಯಕ್ಷಗಾನದಲ್ಲಿ ಪ್ರಭುತ್ವ ಸಾಧಿಸಲು ಹೆಚ್ಚು ಅಧ್ಯಯನ ಮಾಡಬೇಕು. ತೊಡಗಿಸಿಕೊಳ್ಳಬೇಕು ಟೆಂಟ್ ಮೇಳದಲ್ಲಿ ಕೆಲವೊಂದು ಕಲಾವಿದರು ತಯಾರಾಗುತ್ತಿದ್ದಾರೆ ಅನುಭವಗಳನ್ನು ಪಡೆದುಕೊಳ್ಳುತ್ತಿದ್ದಾರೆ.

**ಕಾಲಮಿತಿ ಮತ್ತು ಸೇವಾಕರ್ತರ ಮನೋಭಾವ –** ಹಿಂದೆ ಬೆಳಕಿನ ಸೇವೆಯಾಗಿ ರಾತ್ರಿಯಿಡೀ ಪ್ರದರ್ಶನ ನಡೆಯುತ್ತಿದ್ದ ಯಕ್ಷಗಾನಗಳು ಇಂದು ಕಾಲಮಿತಿಗೆ ಒಳಪಟ್ಟಿವೆ. ಕಾಲಮಿತಿಯ ಅನುಕೂಲವೇನೆಂದರೆ ಪ್ರೇಕ್ಷಕರು ಹೆಚ್ಚು. ಕಾರ್ಯಕ್ರಮ ಚೆನ್ನಾಗಾಗುತ್ತಿತ್ತು. ಮಳೆಗಾಲದ ಸೇವೆಯಾಟ ಪ್ರಾರಂಭವಾದದ್ದು ಧರ್ಮಸ್ಥಳ ಮೇಳದವರಿಂದ ಸಂಜೆ 4 ಗಂಟೆಗೆ ಶುರು ಮಾಡಿ 12.30 ರ ವರೆಗೆ ಪ್ರದರ್ಶನ ನೀಡುತ್ತಿದ್ದರು.. ಅದನ್ನೇ ಈಗ ಮಂದಾರ್ತಿ ಮೇಳದಲ್ಲೂ ಮಾಡುತ್ತಿದ್ದೇವೆ.

ಇಡೀ ರಾತ್ರಿಯಲ್ಲಿ ನಡೆಯುವ ಪ್ರದರ್ಶನಗಳಲ್ಲಿ ಯಕ್ಷಗಾನದ ಸಮರ್ಥ ಪ್ರದರ್ಶನ ಸಾಧ್ಯವಾಗುತ್ತದೆ. ಕೊನೆಯ ಜಾವದಲ್ಲಿ ಮಡುವ ಯಕ್ಷಗಾನದಲ್ಲಿ ಆಹಾರ್ಯಗಳ ರುಚಿ ಜಾಸ್ತಿ ಶ್ರುತಿಯ ಬದ್ಧತೆ ಕಪ್ಪು ಮೂರು, ಬಿಳಿ ನಾಲ್ಕು ಇವುಗಳೆಲ್ಲ ಪರಿಣಾಮಕಾರಿಯಾಗಿ ಮೂಡಿ ಬರುತ್ತವೆ. ಆಗಿನ ಸಂದರ್ಭವೂ ಹಾಗೆಯೇ, ನೀರವ ಮೌನ ವಾತಾವರಣ, ಸದ್ದು ಸಪ್ಪಳಗಳಿರುವುದಿಲ್ಲ. ಕೆಲವೊಂದು ರಸಗಳು ಈ ಸಮಯದಲ್ಲಿ ಹೆಚ್ಚು ಪ್ರಭಾವ ಬೀರುತ್ತದೆ. ಹಾಗಾಗಿ ಬೆಳಗಿನ ಜಾವದ ಆಟಗಳೇ ಚೆನ್ನ. ಕಾಲಮಿತಿ ಪ್ರದರ್ಶನದಲ್ಲಿ ಏಳೂವರೆಗೆ ಒಂದು ಶ್ರುತಿ, 8 – 9.30 ಒಂದು ಶ್ರುತಿ, ಅದನ್ನು ಕೇಳಿದಾಗ ರಾತ್ರಿಯೇ ಬೆಳಗಾಯ್ತು ಎನ್ನುವ ಭಾವನೆ ಮೂಡ್ತಿತ್ತು. ಹರಕೆಯಾಟದ ಸೇವಾಕರ್ತರ ಮನೋಭಾವದ ಬಗ್ಗೆ ಹೀಗೆನ್ನುತ್ತಾರೆ – ಹರಕೆಯಾಟದ ಸೇವಾಕರ್ತರು ಹರಕೆಯನ್ನು ತೀರಿಸುವುದು ಒಂದನೆಯ ಮನೋಭಾವವಾದರೆ, ಶ್ರದ್ಧಾ ಭಕ್ತಿಯಿಂದ ಪ್ರಸಂಗದ ಬಗ್ಗೆ ಆಸಕ್ತಿ ಇರುವವರೂ ಇದ್ದಾರೆ. ಇನ್ನು ಕೆಲವರು ವೀಳ್ಯದ ಹಣ ನೀಡಿ ಬೆಳಿಗ್ಗೆ ಪ್ರಸಾದ ಕಳ್ಸಿ ಎನ್ನುವವರೂ ಇದ್ದಾರೆ.

**ಕಲಾವಿದರ ಸಂಭಾವನೆ –** ಕಲಾವಿದರ ಕ್ಷೇಮದ ಬಗ್ಗೆ ಮೇಳಗಳ ಕೊಡುವ ವೇತನ ಚೆನ್ನಾಗಿಯೇ ನೀಡುತ್ತಾರೆ. ಮಂದಾರ್ತಿಯಲ್ಲಿ ಸರ್ಕಾರದ ಪದ್ಧತಿಯಂತೆ ಕಲಾವಿದರಿಗೆ ವೇತನ ನೀಡಲಾಗುತ್ತಿದೆ.

**ನಿಮಗಿದು ಗೊತ್ತೇ? –** "**ಯಕ್ಷಿಕಾ**" ಎಂಬುದು ಗುಣಸುಂದರಿ ಪ್ರಸಂಗದ ಪಾಪಣ್ಣ ಖ್ಯಾತಿಯ ಹಾಸ್ಯಗಾರ **ಬೆಟ್ಟಂಪಾಡಿ ಬಾಳಪ್ಪ ಶೆಟ್ಟಿ**ಯವರ ಅಭಿನಂದನಾ ಗ್ರಂಥ (**ಸಂಪಾದಕರು–ಭಾಸ್ಕರ ರೈ ಕುಕ್ಕುವಳ್ಳಿ**). ಈ ಗ್ರಂಥವನ್ನು ಅವರ ಅಭಿಮಾನಿಗಳು ಅವರ ಕಲಾಸೇವೆಯನ್ನು ಗೌರವಿಸಿ 1983ರಲ್ಲಿ ಸಮರ್ಪಿಸಿದ್ದರು. 2005ರಲ್ಲಿ ಅವರು ನಿಧನರಾದಾಗ ಅವರ ಹಿರಿಯ ಪುತ್ರ ಸುಂದರ ಶೆಟ್ಟರು **ಬೆಟ್ಟಂಪಾಡಿ ಬಾಳಪ್ಪ ಶೆಟ್ಟಿ ಯಕ್ಷ ಪ್ರತಿಷ್ಠಾನ**ವನ್ನು ಹುಟ್ಟು ಹಾಕಿದ್ದಾರೆ. ಮಂಗಳೂರಿನ 'ಯಕ್ಷಾಂಗಣ'ದ 'ಯಕ್ಷಗಾನ ತಾಳಮದ್ದಳೆ ಸಪ್ತಾಹ'ದಲ್ಲಿ ಬಾಳಪ್ಪ ಶೆಟ್ಟರ ನೆನಪಿನಲ್ಲಿ ಎಪ್ಪತ್ತೈದರ ಹರೆಯದ ವೇಷಧಾರಿ, ಅರ್ಥಧಾರಿ, ನಿವೃತ್ತ ಶಿಕ್ಷಕ ನುಳಿಯಾಲು ಸಂಜೀವ ರೈಯವರಿಗೆ ಪ್ರಶಸ್ತಿ ಪ್ರದಾನ ನಡೆಯಿತು.

**ಗಮನಿಸಿ– ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಿಯದ್ದಲ್ಲ. ನಿಮ್ಮ ಪ್ರತಿಕ್ರಿಯೆಯನ್ನು ಕಳುಹಿಸಬೇಕಾದ ಇ–ಮೇಲ್** – nadanoopuravandaru@gmail.com **ಮೊಬೈಲ್ ಸಂಖ್ಯೆ**–9449686807 **ನಮ್ಮ ವೆಬ್ ಸೈಟ್ ವಿಳಾಸ**– **www.nyt.1ngo.in** - **ಸಂಪಾದಕರು**

## ನಮ್ಮ ಲೈಬ್ರರಿ – ಅತಿಕಾಯ ಕಾಳಗ

ಅತಿಕಾಯ ಕಾಳಗವು ಒಂದು ಪೌರಾಣಿಕ ಪ್ರಸಂಗ. ರಾಮಾಯಣದಿಂದ ಆಯ್ದ ಕಥಾನಕ ಇದಾಗಿದೆ. ರಾವಣ ಹಾಗೂ ಧಾನ್ಯಮಾಲಿನಿಯರ ಪುತ್ರ ಅತಿಕಾಯನು ಪರಮ ದೈವಭಕ್ತ. ರಾಮಸೇನೆಯ ಜೊತೆ ಹೋರಾಡಿ ಕೊನೆಗೆ ಲಕ್ಷ್ಮಣನ ಶರಕ್ಕೆ ಶರಣಾಗಿ ಮುಕ್ತಿ ಹೊಂದುವ ರಾಮಭಕ್ತನೀತ ಅತಿಕಾಯ. ಅತಿಕಾಯ ಕಾಳಗ ಯಕ್ಷಗಾನ ಪ್ರಸಂಗವನ್ನು ಹಲವು ಕವಿವರ್ಯರು ಯಕ್ಷಗಾನ ರೂಪದಲ್ಲಿ ರಚಿಸಿದ್ದಾರೆ, ಬಹಳ ಮುಖ್ಯವಾಗಿ ಸಿಗುವ ಪ್ರಸಂಗ ಹಟ್ಟಿಯಂಗಡಿ ರಾಮಭಟ್ಟ ವಿರಚಿತ ಕೃತಿಯಾಗಿದೆ. ಪಾವಂಜೆ ರಾವ್ ಅವರ ಉಡುಪಿಯ ಶ್ರೀ ಮನ್ಮಧ್ವಸಿದ್ಧ ಗ್ರಂಥಾಲಯ ಇದರ 1950 ರ ಎರಡನೆಯ ಅಚ್ಚು, 1968 ರ ಐದನೆಯ ಮುದ್ರಣ ಪುಸ್ತಕ, ವಿದ್ವಾನ್ ಡಿವಿ ಹೊಳ್ಳರವರು 1970ರಲ್ಲಿ ಪ್ರಕಟಿಸಿದ ಯಕ್ಷಗಾನದ ಮೇರು ಕಲಾವಿದ ಶ್ರೀ ವೀರಭದ್ರ ನಾಯಕ್ ಅವರ ಅರ್ಥವನ್ನೊಳಗೊಂಡ ಪುಸ್ತಕ, ಚಿತ್ರಕಲಾವಿದ ಶ್ರೀ ರಾಘವ ರಾವ್ ಸಂಸ್ಮರಣಾ ಗ್ರಂಥ ರಾಘವಾಯಣದಲ್ಲಿ ತ್ರಿಭಾಷಾ ಪ್ರಸಂಗ ಸಾಹಿತ್ಯ ವಿಭಾಗದಲ್ಲಿ ಶ್ರೀ ಜಿಕೆ ಭಟ್ ರವರ ಇಂಗ್ಲಿಷ್ ಅರ್ಥಗಳಿಂದ ಕೂಡಿದ ಪುಸ್ತಕ, ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಗಣಕಯಂತ್ರ ಮುದ್ರಿತ ಪುಸ್ತಕವಲ್ಲದೆ ಹಟ್ಟಿಯಂಗಡಿ ರಾಮಭಟ್ಟರೂ ಅತಿಕಾಯ ಕಾಳಗ ಪ್ರಸಂಗವನ್ನು ಬರೆದಿದ್ದಾರೆ. ಅತಿಕಾಯ ಕಾಳಗ ಪ್ರಸಂಗ ಸಾಹಿತ್ಯವನ್ನು ಅಡೂರು ಬಳಕಿಲ ವಿಷ್ಣಯ್ಯ ಪೆರುವಾಡಿ ಸಂಕಯ್ಯ, ಭಾಗವತ ಗಣಪತಿ ಅಣ್ಣಪ್ಪ ಹೆಗಡೆ, ವಿಶ್ವ ವಿನೋದ ಬನಾರಿಯವರು ಕನ್ನಡದಲ್ಲಿಯೂ ರಾಮಯ್ಯ ಶೆಟ್ಟಿ ಪುಳಿಂಚ ಮತ್ತು ಕೆಳಿಂಜ ಸೀರತಾರಾಮ ಆಳ್ವರವರು ತುಳುಭಾಷೆಯಲ್ಲಿಯೂ ರಚಿಸಿರುವ ಮಾಹಿತಿ ಸಿಗುತ್ತದೆ. ಅತಿಕಾಯ ಪ್ರಸಂಗವು ತಾಳಮದ್ದಳೆಯಲ್ಲಿ ಹೆಚ್ಚಾಗಿ ಪ್ರಯೋಗವಾಗುವ ಪ್ರಸಂಗವಾಗಿದೆ. ಅತಿಕಾಯನ ಕುರಿತ ಇನ್ನೊಂದು ಪ್ರಸಂಗ ಅತಿಕಾಯ ವಿಜಯ ವಿಭಿನ್ನ ಕಥಾಹಂದರವನ್ನು ಹೊಂದಿದ್ದು ಇದರ ರಚಯಿತರು ವೈ ವೆಂಕಟೇಶ್ವರ ಭಟ್ ಏತಡ್ಕ. ರಾಮ ರಾವಣರ ಯುದ್ಧದಲ್ಲಿ ನರಾಂತಕ, ದೇವಾಂತಕ, ತ್ರಿಶಿರ, ಪ್ರಹಸ್ತ ಮೊದಲಾದ ರಾಕ್ಷಸರು ಅಳಿದಾಗ ಕೋಪಗೊಂಡ ರಾವಣ ರಾಮನ ವಾನರ ಸೇನೆಯನ್ನು ಸೋಲಿಸುವ ಪಣ ತೊಡುತ್ತಾನೆ. ಆಗ ರಾವಣನ ಇನ್ನೋರ್ವ ಪತ್ನಿ ಧ್ಯಾನಮಾಲಿನಿಯ ಮಗನಾದ ಅತಿಕಾಯ ಸಭೆಯಲ್ಲಿ ತಂದೆಗೆ ಸೀತೆಯನ್ನು ರಾಮನಿಗೆ ಒಪ್ಪಿಸಿ ವಿಭೀಷಣನನ್ನು ಕರೆತಂದು ರಾಜ್ಯವಾಳುವಾತನೇ ನೀತಿ ಬೋಧೆ ಮಾಡಿ ರಾವಣ ಒಪ್ಪದಿದ್ದಾಗ ತಾನೇ ಅಂದಿನ ಸಮರಕ್ಕೆ ಸನ್ನದ್ಧನಾಗುತ್ತಾನೆ. ಆ ದಿನ ನಡೆದ ಭೀಕರ ಕಾಳಗದಲ್ಲಿ ಲಕ್ಷ್ಮಣನ ಬ್ರಹ್ಮಾಸ್ತ್ರಕ್ಕೆ ಅತಿಕಾಯ ಅಳಿಯುತ್ತಾನೆ. ವಿಷಯ ತಿಳಿದ ಧ್ಯಾನಮಾಲಿನಿಯು ಅತೀವ ಶೋಕದಿಂದಿರುವುದನ್ನು ಕಂಡು ಕೋಪೋದ್ರಿಕ್ತನಾಗುತ್ತಾನೆ. ಬಳಿಕ ದಶಕಂಠ ತಾನೇ ಯುದ್ಧಕ್ಕೆ ಬರುತ್ತಾನೆ. ರಾವಣನು ಸುಗ್ರೀವ, ಅಂಗದ, ಮೊದಲಾದ ಕಪಿವೀರರನ್ನು ಸೋಲಿಸಿ ಅತಿಕಾಯನ ಅಳಿವಿಗೆ ಕಾರಣನಾದ ಲಕ್ಷ್ಮಣನ ಮೇಲೆ ಮಹಾಸ್ತ್ರವನ್ನು ಪ್ರಯೋಗಿಸುತ್ತಾನೆ. ಮೂರ್ಛೆಗೊಂಡ ಲಕ್ಷ್ಮಣನನ್ನು ಎತ್ತೊಯ್ಯಲು ರಾವಣ ಪ್ರಯತ್ನಿಸಿದಾಗ ಇದಿರಾಗುವ ಹನುಮಂತ ಘನರೂಪ ತಾಳಿ ರಾವಣನನ್ನು ಭಂಗಗೊಳಿಸುತ್ತಾನೆ. ಲಕ್ಷ್ಮಣನನ್ನು ಬದುಕಿಸಲು ಹನುಮಂತ ಕುಂಭದ್ರೋಣ ಪರ್ವತಕ್ಕೆ ಹೊರಟಾಗ ರಾವಣ ಕಾಲನೇಮಿ ಎಂಬ ರಾಕ್ಷಸನ ಮೂಲಕ ತೊಂದರೆ ಕೊಡಲು ಅವನನ್ನು ವಧಿಸಿ ಸಂಜೀವಿನಿ ಮೂಲಿಕೆಯನ್ನು ತಂದು ಸುಷೇಣನ ವೈದ್ಯಕೀಯ ಉಪಚಾರ ಪಡೆದು ಲಕ್ಷ್ಮಣ ಎದ್ದೇಳುತ್ತಾನೆ. ಇದು ಹಟ್ಟಿಯಂಗಡಿ ರಾಮಭಟ್ಟರ ಅತಿಕಾಯ ಕಾಳಗ ಪ್ರಸಂಗದ ಕಥಾ ಸಾರಾಂಶ.



ರಾಮಭಟ್ಟರ ಅತಿಕಾಯ ಕಾಳಗ ಯಕ್ಷಗಾನ ಪ್ರಸಂಗ 355 ಪದ್ಯಗಳಿಂದ ಕೂಡಿದ್ದು ಪರಮೇಶ್ವರನು ಪಾರ್ವತಿಗೆ ರಾಮಾಯಣದ ರಾಮ ರಾವಣರ ಯುದ್ಧವನ್ನು ವಿವರಿಸುವ ಸಂದರ್ಭದಕಲ್ಲಿ ಪಾರ್ವತಿ ಕೇಳಿಕೊಂಡಳೆಂದು ಶಿವನು ಅತಿಕಾಯ ಕಾಳಗ ಹಾಗೂ ರಾವಣನ ದಿವ್ಯಾಸ್ತ್ರದಿಂದ ಮೂರ್ಛಿತನಾದ ಲಕ್ಷ್ಮಣನನ್ನು ಹನುಮ ಸಂಂಜಿವಿನಿ ತಂದು ಬದುಕಿಸುವ ಕಥೆಯನ್ನು ವಿವರಿಸುತ್ತಾನೆ. ವೀರಭದ್ರ ನಾಯಕರ ಕನ್ನಡ ಅರ್ಥವನ್ನೊಳಗೊಂಡ ಹಾಗೂ ಜಿಕೆ ಭಟ್ಟರ ಇಂಗ್ಲಿಷ್ ಅರ್ಥದ ಪ್ರಸಂಗ ಹಾಗೂ ಅತಿಕಾಯ ಮೋಕ್ಷ ಎನ್ನುವ ಪ್ರಸಂಗ ಪುಸ್ತಕದಲ್ಲಿ ಅತಿಕಾಯ ವಧೆಯ ಸನ್ನಿವೇಷದವರೆಗೆ ಹಾಗೂ ಯಕ್ಷಗಾನ ಬಯಲಾಟ ಹಾಗೂ ತಾಳಮದ್ದಳೆ ಕೂಟಗಳಲ್ಲಿ ಬಳಸುವ ಆಯ್ದ ಪದ್ಯಗಳನ್ನು ಇದು ಒಳಗೊಂಡಿದೆ.

ಅತಿಕಾಯ ವಿಜಯ ವೈ ವೆಂಕಟೇಶ್ ಭಟ್ ಏತಡ್ಕ ರಚಿಸಿರುವ ಅತಿಕಾಯನ ಕುರಿತಾದ ಇನ್ನೊಂದು ಯಕ್ಷಗಾನ ಪ್ರಸಂಗ. ಇದು ಅತಿಕಾಯ ದೇವಲೋಕದ ಅಧಿಪತಿ ಇಂದ್ರನನ್ನು ಸೋಲಿಸಿ ಮೆರೆಯುವ ಕಥೆಯನ್ನು ಹೊಂದಿರುವ ಪ್ರಸಂಗ. ಇದು ಪೂರ್ವ ರಾಮಾಯಣದ ಕಥೆಯಾಗಲೀ ಕೃತಿಯಲ್ಲಿ ಆಗಲೀ ಯಾವುದೇ ಆಧಾರ ಗ್ರಂಥದ ಉಲ್ಲೇಖ ಇಲ್ಲದ ಕಾರಣ ಕವಿ ಏತಡ್ಕ ವೆಂಕಟೇಶ ಭಟ್ಟರ ಕಾಲ್ಪನಿಕ ಕಥೆ ಕೂಡಾ ಆಗಿರುವ ಸಾಧ್ಯತೆ ಇದೆ. ಅತಿಕಾಯ ವಿಜಯ ಸುಮಾರು 308 ಪದ್ಯಗಳನ್ನು ಒಳಗೊಂಡಿದೆ. ಯಕ್ಷಗಾನದ ಛಂದಸ್ಸುಗಳಿಂದ ಕೂಡಿದ ಸುಂದರ ಪ್ರಸಂಗ ಇದು.

ದೇವೇಂದ್ರನ ಒಡ್ಡೋಲಗದಿಂದ ಪ್ರಸಂಗ ಪ್ರಾರಂಭವಾಗುತ್ತದೆ. ವಿಷ್ಣುವಿನ ಆಜ್ಞೆಯಂತೆ ನಾರದ ಮುನಿ ಶೋಣಿತಾಪುರಕ್ಕೆ ತೆರಳಿ ಚಂದ್ರಕೇತನೆಂಬ ಅಸುರನನ್ನು ಕಾಣುತ್ತಾನೆ. ಚಂದ್ರಕೇತನು ಈ ಹಿಂದೆ ಮೂರೂ ಲೋಕವನ್ನು ಗೆಲ್ಲಬೇಕು ಎಂಬ ಆಸೆಯಿಂದ ಸ್ವರ್ಗಕ್ಕೆ ಮುತ್ತಿಗೆ ಹಾಕಿ ಇಂದ್ರನ ವಜ್ರಾಯುಧಕ್ಕೆ ಶರಣಾಗಿ ಸೋತು ಅವಮಾನಿತನಾಗಿ ಹಿಂದಿರುಗುತ್ತಾನೆ. ನಾರದನು ಅವನಿಗೆ ನಿನ್ನ ಸಹೊದರಿ ಧ್ಯಾನ ಮಾಲಿನಿಯ ಮಗ ಅತಿಕಾಯ ಮಹಾಪರಾಕ್ರಮಿಯಾಗಿದ್ದು ಅವನ ಸಹಾಯದಿಂದ ನೀನು ದೇವಲೋಕವನ್ನು ಗೆಲ್ಲಬಹುದು ಎಂದು ಹುರಿದುಂಬಿಸುತ್ತಾನೆ. ಅಂತೆಯೇ ಲಂಕೆಗೆ ಬಂದ ಶಶಿಕೇತನು ಧ್ಯಾನಮಾಲಿನಿಯನ್ನು ಕಂಡು ತನ್ನ ನೋವನ್ನು ತೋಡಿಕೊಂಡಾಗ ಆಕೆ ಶಿವನಲ್ಲಿ ಧನುರಾಭ್ಯಾಸವನ್ನು ಮಾಡಿ ಆತನಿಂದ ಪಾಶುಪತ ಮೊದಲಾದ ದಿವ್ಯಾಸ್ತ್ರಗಳನ್ನು ಪಡೆದು ಸಕಲ ವಿದ್ಯಾ ಪಾರಂಗತನಾಗಿ ಬಂದ ಅತಿಕಾಯನಿಗೆ ಮಾವನಿಗೆ ಸಹಾಯ ಮಾಡಲು ತಿಳಿಸುತ್ತಾಳೆ. ಅಂತೆಯೇ ತಂದೆಯಾದ ರಾವಣನ ಅನುಮತಿ ಪಡೆದು ಮಾವ ಚಂದ್ರಕೇತನೊಡನೆ ಅತಿಕಾಯ ಇಂದ್ರಲೋಕಕ್ಕೆ ಮುತ್ತಿಗೆ ಹಾಕುತ್ತಾನೆ. ಅಷ್ಟದಿಕ್ಪಾಲಕರು ಜಯಂತ ಇಂದ್ರನನ್ನು ಪರಾಭವಗೊಳಿಸಲು ದೇವೇಂದ್ರನು ವಿಷ್ಣುವಿನ ಸಹಾಯ ಯಾಚಿಸುತ್ತಾನೆ. ಸಮರದಲ್ಲಿ ಹರಿಗೆ ಸಮನಾಗಿ ಅತಿಕಾಯ ಹೋರಾಟ ನಡೆಸಲು ನಾರಾಯಣನು ಸುದರ್ಶನ ಚಕ್ರ ಪ್ರಯೋಗಿಸುತ್ತಾನೆ ಅದಕ್ಕೆ ಪ್ರತಿಯಾಗಿ ಹರನಿಂದ ಪಡೆದ ಪಾಶುಪತಾಸ್ತ್ರವನ್ನು ಅತಿಕಾಯ ಪ್ರಯೋಗಿಸಿ ಹರಿಯನ್ನು ಎದುರಿಸುತ್ತಾನೆ,. ಕೊನೆಗೆ ಮಹಾವಿಷ್ಣುವು ಅತಿಕಾಯನ ಶೌರ್ಯಕ್ಕೆ ಮೆಚ್ಚಿ ಕದನ ನಿಲ್ಲಿಸಿ ನೀನು ತಾಯಿಗೆ ಕೊಟ್ಟ ಮಾತಿನಂತೆ ಇಂದ್ರನನ್ನು ಗೆದ್ದು ವಿಜಯಿಯಾಗಿದ್ದೀಯ, ನಿನಗೆ ಶುಭವಾಗಲಿ ಮುಂದೆ ರಾಮಾಯಣ ಕಾಲದಲ್ಲಿ ನಡೆಯುವ ಯುದ್ಧದಲ್ಲಿ ನಿನಗೆ ಮುಕ್ತಿ ನೀಡುತ್ತೇನೆ ಎಂದು ಹರಸಿ ಕಳುಹಿಸಿಕೊಡುತ್ತಾನೆ ಎನ್ನುವುದು ಈ ಪ್ರಸಂಗದ ಕಥಾವಸ್ತು.

*ಲೇಖಕರು – ಶಿರೂರು ಉಮೇಶ್*